ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 43 ಅಕ್ಟೋಬರ್ 26, 1986 ಬೆಲೆ 80 ಪೈಸೆ

ಒಳಗೇನಿದೆ?....

ಮೊಜಾಂಬಿಕ್ ಅಧ್ಯಕ್ಷರ ಪ್ರಾಣಹರಣ

ಮೊಜಾಂಬಿಕ್‌ನ ಅಧ್ಯಕ್ಷ ಹಾಗೂ ಗೆರಿಲ್ಲಾ ಹೋರಾಟಗಾರ ಕಾಂ. ಸಮೋರ ಮಾಚೆಲ್‌ರವರು ದಿನಾಂಕ *20-10-86* ರಂದು ವಿಮಾನಾಪಘಾತದಲ್ಲಿ ಕೊಲೆಯಾದರು.

ಅಂತರ್ರಾಷ್ಟ್ರೀಯ ಶೋಷಕರ ಕೈಗೊಂಬೆ ದ. ಆಫ್ರಿಕಾ ವರ್ಣ ದ್ವೇಷಿ ಸರಕಾರದ ದುಷ್ಕೃತ್ಯ ಇದು ಎಂದು ಬಣ್ಣಿಸಲ್ಪಟ್ಟಿದೆ.

ಮೊಜಾಂಬಿಕ್ ಅಧ್ಯಕ್ಷ, ಈ ದೇಶದಲ್ಲಿ 1975ರ ಜೂನ್ 25 ರಂದು ಪೋರ್ಚುಗೀಸರನ್ನೋಡಿಸಿ ಮೊಜಾಂಬಿಕ್ ಜನತಾ ಗಣರಾಜ್ಯವನ್ನು ಘೋಷಿಸಿದ "ಫ್ರೆಲಿಮೊ" ಪಕ್ಷದ ಹಾಗೂ ಗೆರಿಲ್ಲಾ ಪಡೆಯ ನೇತಾರ ಸಮೋರ್ ಮಾಚೆಲ್‌ರವರು ದಿನಾಂಕ 20-10-86 ರಂದು ವರ್ಣದ್ವೇಷಿ ಅಪಾರ್ಥೀಡ್ ದ. ಆಫ್ರಿಕಾದ ಗಡಿಯೊಳಗೆ ಕೊಲ್ಲಲ್ಪಟ್ಟರು. ಅವರು ದ. ಆಫ್ರಿಕಾದ ಗಡಿ ರಾಷ್ಟ್ರಗಳಾದ ಜಾಂಬಿಯಾ, ಅಂಗೋಲಾ ಹಾಗು ಜೈರೆಯ ನಾಯಕರೊಡನೆ ದ. ಆಫ್ರಿಕಾ ಈ ರಾಷ್ಟ್ರಗಳ ಮೇಲೆ ಹೇರಿಸಿಕೊಳ್ಳುತ್ತಿರುವ ಆರ್ಥಿಕ ಹಾಗೂ ಮಿಲಿಟರಿ ಪ್ರತಿಕಾರವನ್ನು

ಪಿ. ಬಿ. ಸಂತಾಪ

ಕ್ರಾಂತಿಕಾರಿ ನಾಯಕ, ಫ್ರೆಲಿಮೊ ಪಕ್ಷದ ಅಧ್ಯಕ್ಷ ಕಾಂ. ಸಮೋರ ಮಾಚೆಲ್‌ರವರ ನಿಧನಕ್ಕೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ತನ್ನ ತೀವ್ರ ಸಂತಾಪವನ್ನು ಸೂಚಿಸಿದೆ.

ಎದುರಿಸುವುದು ಹೇಗೆ ಎಂಬ ಬಗ್ಗೆ ಚರ್ಚಿಸಿ ಸೋವಿಯೆತ್ ವಿಮಾನವೊಂದರಲ್ಲಿ ತಮ್ಮ ರಕ್ಷಣಾ ಸಚಿವ, ಸಾರಿಗೆ ಸಚಿವ ಹಾಗೂ ಮೊಜಾಂಬಿಕ್‌ನಲ್ಲಿ ಜೈರೆ ದೇಶದ ರಾಯಭಾರಿಯಾಗಿರುವವರೊಡನೆ ಮರಳುತ್ತಿದ್ದಾಗ ವಿಮಾನ ನೆಲಕ್ಕುರುಳಿಸಲ್ಪಟ್ಟು ಕೊಲೆಯಾದರು.

ಜಗತ್ತಿನೆಲ್ಲಾ ಪ್ರತಿಗಾಮಿಗಳೂ ಒಟ್ಟಿಗೆ ಸೇರಿ, ತಮ್ಮ ಭಯಾನಕ ಮುಖವನ್ನೂ, ಕ್ರೂರ ಕೋರೆ ದಾಡೆಗಳನ್ನು ದ. ಆಫ್ರಿಕಾದ ಅಸಹಾಯಕ ಕಪ್ಪು ಜನತೆಯ ಮೇಲೆ, ಗಡಿ ರಾಷ್ಟ್ರಗಳ ಮೇಲೆ ಪ್ರಯೋಗಿಸುತ್ತಿರುವಾಗ; ಜಗತ್ತಿನ ಜನಾಭಿಪ್ರಾಯ, ಪ್ರತಿಗಾಮಿಗಳ ಶಿರೋಮಣಿ ಅಮೇರಿಕದ ಜನಾಭಿಪ್ರಾಯ ಕುದಿದೆದ್ದು ಈ ವರ್ಣದ್ವೇಷಿ ಸರಕಾರಕ್ಕೆ ನಿಮ್ಮ ಕುತಂತ್ರ ನಾಟಕಗಳನ್ನು ಕಟ್ಟಿಡಿ, ದ.ಆಫ್ರಿಕಾ ದೇಶದ ಕರಿಯರ ರಕ್ತವನ್ನು ಸುಟ್ಟು ಡಾಲರುಗಳಾಗಿಸುವ ಕೊಲೆಯನ್ನು ಬಿಡಿ ಎಂದು ಘೋಷಿಸುತ್ತಿರುವಾಗ, ಸುತ್ತ ಸುತ್ತ ಮರಿಯಲ್ಪಟ್ಟ ಹಿಂಸ್ರ ಪಶುವಿನಂತೆ ವರ್ತಿಸುತ್ತಿರುವ ದ. ಆಫ್ರಿಕಾದ ರಾಕ್ಷಸ ಸರಕಾರವೇ ಈ ವಿಮಾನಾಪಘಾತಕ್ಕೆ ಕಾರಣ ಎಂದು ನೆರೆಹೊರೆಯ ರಾಷ್ಟ್ರಗಳ ಪ್ರಮುಖರು, ದ. ಆಫ್ರಿಕಾದ ಕ್ರಾಂತಿಕಾರಿ ಆಫ್ರಿಕಾ ನ್ಯಾಷನಲ್ ಕಾಂಗ್ರೆಸ್‌ನ ಅಧ್ಯಕ್ಷ ಆಲಿವರ್ ಟಾಂಬೊ ಮಾತ್ರವಲ್ಲ ಕಾಮನ್‌ವೆಲ್ತ್‌ನ ಕಾರ್ಯದರ್ಶಿ ರಾಮ್‌ಫಲ್‌ರವರು ನಿಸ್ಸಂದಿಗ್ಧವಾಗಿ ಘೋಷಿಸಿದ್ದಾರೆ. (8ನೇ ಪುಟ ನೋಡಿ)

ವಿಮೋಚನೆಯಾದಾಗ ಶೇ. 93 ರಷ್ಟು ನಿರಕ್ಷರಿಗಳಿದ್ದ ದೇಶ ಮೊಜಾಂಬಿಕ್ ಅನ್ನು 'ಸಾಮೂಹಿಕ ಹಳ್ಳಿ' (Collective Villages) ಎಂಬ ಸಹಕಾರಿ ಬೇಸಾಯಕ್ಕೆ ತೊಡಗಿಸಿ, ನೂರಾರು ಉತ್ಪಾದಕ ಸಹಕಾರಿ ಸಂಘಗಳ ಹಾಗೂ 50 ದೊಡ್ಡ ಫಾರ್ಮ್‌ಗಳನ್ನು ಸೃಜಿಸಿದೆ ಮೊಜಾಂಬಿಕ್‌ನ ನಾಯಕ ಫ್ರೆಲಿಮೊ ಪಕ್ಷ. 1.3 ಕೋಟಿ ಜನರ ಈ ದೇಶ 450 ವರ್ಷಗಳ ಕಾಲ ಪೋರ್ಚುಗೀಸರ ದಬ್ಬಾಳಿಕೆಯಲ್ಲಿ ನಲುಗಿ ಹೋಗಿತ್ತು. ಈ ದೇಶವನ್ನು 1964 ರಲ್ಲಿ ರೂಪುಗೊಂಡ ಫ್ರೆಲಿಮೊ ಕ್ರಾಂತಿಕಾರಿ ಹೋರಾಟದ ಮೂಲಕ 25-6-1975 ರಲ್ಲಿ ವಿಮೋಚನೆಗೊಳಿಸಿತು.

ವಿಮೋಚನೆಗೊಂಡ ಕೇವಲ ಹತ್ತು ವರ್ಷಗಳಲ್ಲಿ ಬ್ಯಾಂಕುಗಳು, ವಿಮಾ ಕಂಪನಿಗಳು, ವಿದೇಶ ವಾಣಿಜ್ಯವನ್ನು ರಾಷ್ಟ್ರೀಕರಿಸಲಾಗಿದೆ. ಸಾರಿಗೆ, ವಿದ್ಯುತ್ ಹಾಗೂ ಕೈಗಾರಿಕೆಗಳ ಬಹು ಭಾಗ ಸಾರ್ವಜನಿಕ ಉದ್ಯಮದ ಕೈಯಲ್ಲಿದೆ.

ಶಿಕ್ಷಣ ಹಾಗೂ ಆರೋಗ್ಯ ಸೇವೆಗಳು ಪೂರ್ಣ ಮುಫತ್ತಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವವರ ಸಂಖ್ಯೆ ಎರಡು ಪಟ್ಟಾಗಿದ್ದರೆ, ಹೈಸ್ಕೂಲುಗಳಲ್ಲಿ ಕಲಿಯುತ್ತಿರುವವರ ಸಂಖ್ಯೆ ನಾಲ್ಕು ಪಟ್ಟು ಹೆಚ್ಚಾಗಿದೆ.

ಮೂರು ವರ್ಷಗಳ ತೀವ್ರ ಬರಗಾಲದಿಂದ, ನೆರೆಯಿಂದ ಬಳಲುತ್ತಿರುವ ಈ ದೇಶ ತನ್ನ ವೈರಿಗಳನ್ನು ಎದುರಿಸಿ ಮುನ್ನಡೆಯತೊಡಗಿದೆ.

ಅಖಿಲ ಭಾರತ ಮಹಿಳಾ ಸಮ್ಮೇಳನ :

ಸ್ತ್ರೀ ವಿಮೋಚನೆಯಾಗುವವರೆಗೂ ಸಮಾಜವಾದ ಸಾಧ್ಯವಿಲ್ಲ -ಕಾ|| ಇ. ಎಂ. ಎಸ್.

ಪಂಕಜ್ ಆಚಾರ್ಯ ನಗರ (ತಿರುವನಂತಪುರ): ಮುಸ್ಲಿಂ ಮಹಿಳೆಯರ ವಿರುದ್ಧವಾದ ಮುಸ್ಲಿಂ ಮಹಿಳಾ ಸಂರಕ್ಷಣಾ ನಿಯಮವನ್ನು ರದ್ದು ಮಾಡಬೇಕೆಂದು ಸಿ.ಪಿ.ಐ. (ಎಂ) ನ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್ ನಂಬೂದರಿ ಪಾಡ್‌ರವರು ಪ್ರಧಾನಿ ರಾಜೀವ್ ಗಾಂಧಿಯವರನ್ನು ಒತ್ತಾಯಿಸಿದ್ದಾರೆ.

ಪ್ರಜಾ ಸತ್ತಾತ್ಮಕ ಮಹಿಳಾ ಸಂಘಟನೆಯ ಎರಡನೇ ಅಖಿಲ ಭಾರತ ಸಮ್ಮೇಳನವನ್ನು ಉದ್ಘಾಟನೆ ಮಾಡುತ್ತಾ ಹೀಗೆ ಹೇಳಿದ್ದಾರೆ ಯೂನಿಫಾರಂ ಸಿವಿಲ್ ಕೋಡ್‌ನ್ನು ಈಗ ತರಾತುರಿಯಾಗಿ ತರಬೇಕಾಗಿಲ್ಲ ಕ್ರಿಮಿನಲ್ ಪ್ರೊಸಿಜರ್, ಕೋಡ್‌ನ 125ನ ನಿಯಮಾವಳಿಯಿಂದ ಎಲ್ಲಾ ವಿಭಾಗದ ಜನರಿಗೂ ರಕ್ಷಣೆ ದೊರಕುವಂತೆ ಮಾಡಬೇಕು. ಯೂನಿಫಾರಂ ಸಿವಿಲ್ ಕೋಡ್‌ನ ಬಗ್ಗೆ

[8ನೇ ಪುಟ ನೋಡಿ]

ಪದಾಧಿಕಾರಿಗಳು

ಅಧ್ಯಕ್ಷೆ: ಮಂಜರಿ ಗುಪ್ತಾ; ಪ್ರಧಾನ ಕಾರ್ಯದರ್ಶಿ: ಸುಶೀಲ ಗೋಪಾಲನ್; ಕಾರ್ಯಾಧ್ಯಕ್ಷೆ: ಆಹಲ್ಯ ರಂಗಣೇಕರ್ ಉಪಾಧ್ಯಕ್ಷೆಯರು: ಕನಕ ಮುಖರ್ಜಿ, ರಾಜೇಂದರ್ ಕೌರ್, ವಿಮಲಾ ರಣದಿವೆ, ಇಳಾ ಭಟ್ಟಾಚಾರ್ಯ, ಪಾಪ ಉಮನಾಥ್, ಲಕ್ಷ್ಮಿ ಸೈಗಾಲ್, ಎಂ. ಉಷಯಂ, ಕುರ್ಷಿದಾ ದತ್ತ್, ಸರೋಜಿನಿ ಬಾಲಾನಂದ್; ಸಹಕಾರ್ಯದರ್ಶಿಗಳು. ಬೃಂದಾಕಾರಟ್, ಶ್ಯಾಮಲಿ ಗುಪ್ತಾ, ಮೈಥಿಲಿ ಶಿವರಾಮನ್ ; ಖಜಾಂಚಿ: ಬಿಭಾ ಘೋಷ್‌ಗೋಸ್ವಾಮಿ ಹಾಗೂ 60 ಜನರ ಕಾರ್ಯಕಾರಿ ಸಮಿತಿ ಚುನಾಯಿತವಾಯಿತು.

ಕರ್ನಾಟಕದಿಂದ ಹರಿಣಕಕ್ಕೇರಿ (ರಾಯಚೂರು ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ) ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯೆಯಾಗಿ ಚುನಾಯಿತರಾಗಿದ್ದಾರೆ.

ಮಹಾರಾಷ್ಟ್ರ :

ಕೋಮು ಸೌಹಾರ್ದತೆಗೆ ಪ್ರಚಾರ ಮಾಸ

ಮಹಾರಾಷ್ಟ್ರದಲ್ಲಿ ಸಿ.ಪಿ.ಐ (ಎಂ) ರಾಜ್ಯ ಘಟಕ ರಾಷ್ಟ್ರೀಯ ಐಕ್ಯತಾ ತಿಂಗಳಾಗಿ ಆಗಸ್ಟ್ ತಿಂಗಳಲ್ಲಿ ಪ್ರಚಾರ ಕಾರ್ಯಕ್ರಮ ಕೈಗೊಂಡಿತ್ತು. ಈ ಪ್ರಚಾರ ಕಾರ್ಯಕ್ರಮದಲ್ಲಿ ಸಾವಿರಾರು ಜನರು ರಾಜ್ಯದ ತುಂಬಾ ಪಾಲ್ಗೊಂಡರು ಹಲವು ಕಡೆ ಇತರ ಎಡ ಮತ್ತು ಜಾತ್ಯಾತೀತ ಶಕ್ತಿಗಳೂ ಪಾಲ್ಗೊಂಡಿದ್ದವು.

ಈ ಪ್ರಚಾರ ಕೈಗೊಂಡಿದ್ದು ದೇಶದಲ್ಲಿ ಮತ್ತು ರಾಜ್ಯದಲ್ಲಿ ಕೋಮು ಮತ್ತು ವಿಚ್ಛಿದ್ರಕಾರಿ ಶಕ್ತಿಗಳು ಸಕ್ರಿಯವಾಗಿರುವುದು ಮತ್ತು ಬಲಶಾಲಿಯಾಗಿರುವ ಹಿನ್ನೆಲೆಯಲ್ಲಿ. ಮಹಾರಾಷ್ಟ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ 59 ಕೋಮು ಗಲಭೆಗಳಲ್ಲಿ 302 ಜನ ಸತ್ತಿದ್ದಾರೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಗಲಭೆಗಳಲ್ಲಿ ಗಾಯಗೊಂಡವರು ಮತ್ತು ಕಷ್ಟನಷ್ಟಕ್ಕೊಳಗಾದವರ ಸಂಖ್ಯೆ ಎಷ್ಟಿದೆಯೆಂದು ಲೆಕ್ಕವಿಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇತ್ತೀಚಿನ ಅವಧಿಯಲ್ಲಿ ಹಿಂದೆಂದೂ ನಡೆಯದ ಸ್ಥಳಗಳಲ್ಲಿ ಕೋಮು ಗಲಭೆಗಳಾಗಿವೆ ಮತ್ತು ರಾಜ್ಯದ ಎಲ್ಲಾ ಭಾಗಗಳಿಗೆ ಈ ಕ್ಯಾನ್ಸರ್ ಹರಡಿದೆ. ಕಳೆದ 3 ತಿಂಗಳುಗಳಿಂದ ಒಂದಲ್ಲ ಒಂದು ಕಡೆ ಗಲಭೆಗಳು ನಡೆಯುತ್ತಿವೆ. ಈ ಗಲಭೆಗಳಲ್ಲಿ ಕೈವಾಡವಿರುವುದು ಮುಖ್ಯವಾಗಿ ರಾಜ್ಯದ ಅರೆ ಫ್ಯಾಸಿಸ್ಟ್ ಸಂಘಟನೆಗೆ ಶಿವ ಸೇನಾದ್ದು. ಶಿವಸೇನಾ ಅಲ್ಲದೆ ಆರ್. ಎಸ್. ಎಸ್., ಹಿಂದೂ ಮಹಾಸಭಾ, ಜಮಾತೇ ಇಸ್ಲಾಮಿ ಮುಂತಾದ ಕೋಮು ಸಂಘಟನೆಗಳು ಹಿಂದೆಂದೂ ಕಾಣದ ರೀತಿಯಲ್ಲಿ ಸಕ್ರಿಯವಾಗಿವೆ. ಇಂತಹ ಹಲವು ಸಂಘಟನೆಗಳ ಹಿಂದೆ ಸಾಮ್ರಾಜ್ಯಶಾಹಿ ಕೈವಾಡ ಹೆಚ್ಚು ಹೆಚ್ಚಾಗಿ ಸ್ಪಷ್ಟವಾಗುತ್ತಿದೆ. ಈ ಎಲ್ಲಾ ಸಂಘಟನೆಗಳಿಗೆ, ಅದರಲ್ಲೂ ಶಿವಸೇನಾಕ್ಕೆ, ಆಳುವ ಪಕ್ಷ ಕಾಂಗ್ರೆಸ್ ವಿವಿಧ ಹಂತಗಳಲ್ಲಿ ನೀಡಿರುವ ಕುಮ್ಮಕ್ಕು, ಬೆಂಬಲದ ಚರಿತ್ರೆ ಬರೆದರೆ ಹಲವು ಸಂಪುಟಗಳಾದೀತು. ಶಿವ ಸೇನಾ ಇಂತಹ ಬೆಂಬಲದಿಂದಲೇ ಮುಂಬಯಿ ಕಾರ್ಪೋರೇಷನ್ ಚುನಾವಣೆಗಳಲ್ಲಿ ಗೆಲ್ಲಲು ಸಾಧ್ಯವಾಯಿತು. ಶಿವಸೇನಾ ಇತ್ತೀಚಿನ ತಿಂಗಳುಗಳಲ್ಲಿ ಆತಂಕಕಾರಿಯಾಗಿ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ತನ್ನ ಜಾಲ ಹರಡುತ್ತಿದೆ ಬೂರ್ಜ್ವಾ ವಿರೋಧ ಪಕ್ಷಗಳೂ ಈ ಸಂಬಂಧದಲ್ಲಿ ಕಳಂಕಿತರಾಗಿದ್ದಾರೆ ಬೆಳಗಾಂವ್ ಗಡಿ ವಿವಾದ ಸಂಬಂಧದಲ್ಲಿ ಎಡ ಪಕ್ಷ PWP ಸೇರಿದಂತೆ ಅವುಗಳ ವಿಚ್ಛಿದ್ರಕಾರಿ ಪಾತ್ರ ಮತ್ತು ಉಮಾಪುರ ಗಲಭೆಗಳಲ್ಲಿ ಕಾಂಗ್ರೆಸ್ (ಎಸ್) ಶಿವಸೇನಾಕ್ಕೆ ನೀಡಿದ ಬೆಂಬಲ ಅವರಿಗೆ ಕಳಂಕ ತರುವ ಉದಾಹರಣೆಗಳು.

ನಾಸಿಕ್ ಇತ್ತೀಚಿನ ತಿಂಗಳುಗಳಲ್ಲಿ ಇಂತಹ ಕೋಮು ಕೇಂದ್ರವಾಗಿದ್ದು ಸಿ.ಪಿ.ಐ. (ಎಂ) ಇಲ್ಲೇ ಕೋಮು ವಿರೋಧಿ ರಂಗ ಸ್ಥಾಪಿಸಿದೆ ರಮಜಾನ್ ಮತ್ತು ಈದ್ ದಿನಗಳಂದು ಈ ರಂಗದ ಸ್ವಯಂ ಸೇವಕರು ಮುಸ್ಲಿಂ ಪ್ರದೇಶಗಳಲ್ಲಿ ಉಳಿದು ಆತ್ಮ ವಿಶ್ವಾಸ ಮೂಡಿಸಿದ್ದು, ಜೂನ್‌ನಲ್ಲಿ ಗಲಭೆಯಿಂದಾಗಿ ಸಂತ್ರಸ್ತ ನೂರು ಜನರನ್ನೊಳಗೊಂಡ ಮೌನ ಮೆರವಣಿಗೆಯ ಮೂಲಕ ಈಗಾಗಲೇ ಎಲ್ಲಾ ಜಾತ್ಯತೀತ ಶಕ್ತಿಗಳನ್ನು ಆಕರ್ಷಿಸಿದ್ದು ಆಗಸ್ಟ್ 9 ರಂದು ಸಾವಿರ ಜನ ಸೇರಿದ್ದ ಸಮಾವೇಶ ಏರ್ಪಡಿಸಿತ್ತು. ಈ ಸಮಾವೇಶದ ಮೊದಲೇ ಹಲವು "ಪ್ರಚಾರಯಾತ್ರಾ"ಗಳು ನಗರವಲ್ಲಿ ಮಾತ್ರವಲ್ಲದೆ, ಜಿಲ್ಲೆಯ ತುಂಬಾ ನಡೆದಿದ್ದವು ಎಡ ಪಕ್ಷ ಮತ್ತು ಜನತಾದ ನಾಯಕರು ಕಾರ್ಯಕರ್ತರುಗಳಲ್ಲದೆ ನಾಸಿಕ್‌ನ ಪ್ರಸಿದ್ಧ ವಕೀಲ ಡಿ.ಟಿ. ಜಯಭಾವೆ (ರಂಗದ ಅಧ್ಯಕ್ಷ) ಮತ್ತು ಪ್ರಖ್ಯಾತ ಸಾಹಿತಿ ವಿ.ವಿ. ಶಿರವಾಡಕರ್ (ಕುಸುಮಾಗ್ರಜ) ಸಮಾವೇಶದಲ್ಲಿ ಭಾಗ ವಹಿಸಿದ್ದರು. ಸಿ ಪಿ ಐ (ಎಂ) ನಾಸಿಕ್ ಜಿಲ್ಲಾ ಸಮಿತಿಯ ಸದಸ್ಯ ಮತ್ತು ರಂಗದ ಕಾರ್ಯದರ್ಶಿ ಡಾ|| ಡಿ. ಎಲ್. ಕಾರಟ್ ಮಂಡಿಸಿದ "ಕೋಮುವಾದ - ವಿರೋಧಿ ರಾಷ್ಟ್ರೀಯ ಐಕ್ಯತೆ"ಗೆ ಕರೆ ಕೊಡುವ ನಿರ್ಣಯವನ್ನು ರಂಗ ಮಂಜೂರು ಮಾಡಿತು ಈ ಸಮಾವೇಶ ಬಹಳಷ್ಟು ರಾಜಕೀಯ ಪರಿಣಾಮ ಬೀರಿದ್ದು ಪ್ರಚಾರ ಮಾಧ್ಯಮಗಳಲ್ಲಿ ಪ್ರಚಾರ ಗಿಟ್ಟಿಸಿದೆ.

ವಿವಿಧ ರಾಜ್ಯಗಳಿಂದ

ಇದಲ್ಲದೆ [illegible]0 ಜನರ ನರಮೇಧ ನಡೆದ ಉಮಾಪುರ ಇರುವ ಬೀಡ್ ಜಿಲ್ಲೆಯಲ್ಲಿ ಇನ್ನೊಂದು ಸೌಹಾರ್ದತಾ ಸಮಾವೇಶ ನಡೆಸಲಾಯಿತು. ಕೇಂದ್ರ ಸಮಿತಿ ಸದಸ್ಯೆ ಅಹಲ್ಯಾ ರಂಗಣೇಕರ್ ಇದರಲ್ಲಿ ಭಾಗ ವಹಿಸಿದ್ದರು.

ಒರಿಸ್ಸಾ :

ಮುಖ್ಯಮಂತ್ರಿ ರಾಜೀನಾಮೆ ಕೊಡಲಿ

ಸೆಪ್ಟೆಂಬರ್ 7, 8 ರಂದು ಸಭೆ ಸೇರಿದ ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಮುಖ್ಯಮಂತ್ರಿ ಜೆ. ಬಿ. ಪಟ್ನಾಯಕ್ ರಾಜೀನಾಮೆ ನೀಡಬೇಕೆಂದು ಒತ್ತಾಯಪಡಿಸಿದೆ.

ಏರುತ್ತಿರುವ ಬಡತನ, ನಿರುದ್ಯೋಗ; ಲಂಗುಲಗಾಮಿಲ್ಲದ ಬೆಲೆಗಳು, ಮುಖ್ಯಮಂತ್ರಿ ಪರಿಹಾರ ನಿಧಿಯ ದುರುಪಯೋಗ, ಮುಖ್ಯಮಂತ್ರಿಯ ಖಾಸಗಿ ಮೊಕದ್ದಮೆಗೆ ಸರ್ಕಾರಿ ಯಂತ್ರದ ದುರುಪಯೋಗ, ಕಾಂಗ್ರೆಸ್ (ಐ)ನ ಮುಗಿಯದ ಒಳಜಗಳಗಳ, ಇವೆಲ್ಲಕ್ಕೂ 'ಕಳಶ' ಪ್ರಾಯವಾಗಿ ಮುಖ್ಯಮಂತ್ರಿಯ ಹೇಸಿಗೆ ತರಿಸುವ ಅನೈತಿಕ ವ್ಯವಹಾರಗಳು– ಇಲ್ಲಿನ ಜನತೆ ತಮ್ಮ ರಾಜ್ಯದ ಬಗ್ಗೆ ಅವಮಾನದಿಂದ ತಲೆ ತಗ್ಗಿಸುವಷ್ಟು ಸಾಮಾಜಿಕ–ರಾಜಕೀಯ ಜೀವನವನ್ನು ಕಲುಷಿತಗೊಳಿಸಿದೆ. ಆದ್ದರಿಂದ ಈ ಪರಿಸ್ಥಿತಿಗೆ ಕಾರಣವಾಗಿರುವ ಮುಖ್ಯಮಂತ್ರಿ ಮತ್ತು ಮಂತ್ರಿಮಂಡಲ ಒಂದು ದಿನವೂ ಅಧಿಕಾರದಲ್ಲಿ ಮುಂದುವರಿಯಲು ಯೋಗ್ಯತೆ ಹೊಂದಿಲ್ಲ ಸೆಪ್ಟೆಂಬರ್ 15ರಂದು ಮಂತ್ರಿಮಂಡಲದ ರಾಜೀನಾಮೆಗೆ ಒತ್ತಾಯ ತರಲು ರಾಜ್ಯಾದ್ಯಂತ ಚಳುವಳಿಗೆ ರಾಜ್ಯಸಮಿತಿ ಕರೆ ನೀಡಿತು.

ಈ ಕರೆಯ ಮೇರೆಗೆ ಕಟಕ್‌ನಲ್ಲಿ ಭಾರಿ ಬಹಿರಂಗ ಸಭೆ ಸೆ. 15ರಂದು ಏರ್ಪಡಿಸಲಾಗಿತ್ತು. ಕಳೆದ 6 ವರ್ಷಗಳಲ್ಲಿ ಪಟ್ನಾಯಕ್ ಮಂತ್ರಿಮಂಡಲದ "ಸಾಧನೆ"ಗಳಾದ ಜನರ ಸಂಕಷ್ಟಗಳು, ಅರಾಜಕತೆ, ಪತ್ರಿಕಾ ಸ್ವಾತಂತ್ರ್ಯದ ಹರಣ ಮತ್ತು ಭ್ರಷ್ಟಾಚಾರಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಲಾಯಿತು. ಈ ಆರು ವರ್ಷಗಳಲ್ಲಿ ಸರ್ಕಾರದ ಒಂದಂಶ ಕಾರ್ಯಕ್ರಮ–ಏನಕೇನ ಪ್ರಕಾರೇಣ ಗದ್ದುಗೆಯಲ್ಲಿರುವುದು. ಮುಖ್ಯಮಂತ್ರಿಗಳ ಅನೈತಿಕ ವ್ಯವಹಾರಗಳಿಗಾಗೇ ಮಂತ್ರಿಮಂಡಲದ ರಾಜೀನಾಮೆ ಕೇಳುತ್ತಿರುವ ಜನತಾ ಪಕ್ಷವು ಜನರ ಸಂಕಷ್ಟಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ ಎಂಬ ಕಾರಣಕ್ಕೆ ಅದನ್ನು ತರಾಟೆಗೆ ತೆಗೆದುಕೊಳ್ಳಲಾಯಿತು. ಪತ್ರಿಕೆಯಲ್ಲಿ ಪ್ರಚಾರ, ವಿಧಾನಸಭೆಯಲ್ಲಿ ಘೇರಾವೋಗಳಿಂದ ಮಂತ್ರಿಮಂಡಲವನ್ನು ಅಧಿಕಾರದಿಂದಿಳಿಸಲು ಸಾಧ್ಯವಿಲ್ಲ. ಅದು ಜನರನ್ನು ತಟ್ಟುವ ರೀತಿಯನ್ನು ಗುರುತಿಸಿ ಆ ವಿಷಯಗಳನ್ನೆತ್ತಿಕೊಳ್ಳುವ ಮೂಲಕ ಜನರನ್ನು ಎಚ್ಚರಿಸಬೇಕು ಮತ್ತು ಈ ಗುರಿಯತ್ತ ಐಕ್ಯ ಚಳುವಳಿಯಲ್ಲಿ ಸಹಕರಿಸುವಂತೆ ಉಳಿದ ವಿರೋಧ ಪಕ್ಷಗಳನ್ನು ವಿನಂತಿಸಲಾಯಿತು.

ಈ ಸಭೆಯ ಕೊನೆಯಲ್ಲಿ "ಅಣಕು ವಿಚಾರಣೆ" ಏರ್ಪಡಿಸಲಾಗಿತ್ತು. ವಿಚಾರಣೆಯುದ್ದಕ್ಕೂ ಪಟ್ನಾಯಕ್‌ನ ಪ್ರತಿಕೃತಿಯೊಂದು ಕುರ್ಚಿಯ ಮೇಲಿತ್ತು. ಕೊನೆಗೆ ಅದನ್ನು ಕುರ್ಚಿಯಿಂದ ಕಿತ್ತೆಸೆಯಲಾಯಿತು.

ಜಮ್ಮು ಮತ್ತು ಕಾಶ್ಮೀರ: ಪ್ರಜಾಪ್ರಭುತ್ವ ಪುನಃಸ್ಥಾಪನೆಯಾಗಲಿ

ಇತ್ತೀಚೆಗೆ ಸಭೆ ಸೇರಿದ್ದ ಸಿ.ಪಿ.ಐ. (ಎಂ) ರಾಜ್ಯ ಸಮಿತಿ, ರಾಜ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿಶ್ಲೇಷಣೆ ನಡೆಸಿ ಎಲ್ಲಾ ಸಮಸ್ಯೆಗಳಿಗೂ ಹೊಸದಾಗಿ ಚುನಾವಣೆಗಳನ್ನು ನಡೆಸಿ ಪ್ರಜಾಪ್ರಭುತ್ವವನ್ನು ಪುನಃಸ್ಥಾಪಿಸುವುದು ಒಂದೇ ಪರಿಹಾರ ಎಂದು ಸೂಚಿಸಿದೆ.

ಬೆಳವಣಿಗೆಯ ಯೋಜನೆಗಳ ಅಭಾವದ ಬಗ್ಗೆ ನಿರ್ಲಕ್ಷ್ಯ, ಬೆಳೆಯುತ್ತಿರುವ ಭ್ರಷ್ಟಾಚಾರ, ಕುಡಿಯುವ ನೀರು ಮತ್ತು ಆಸ್ಪತ್ರೆ ಸೌಲಭ್ಯಗಳ ಅಭಾವ ಜನರನ್ನು ತೀವ್ರವಾಗಿ ಬಾಧಿಸುತ್ತಿದೆ. ರಾಜ್ಯದಲ್ಲಿ ಪ್ರಜಾಪ್ರಭುತ್ವವನ್ನು ದಮನ ಮಾಡುವ ಕೇಂದ್ರ ಸರ್ಕಾರದ ಕ್ರಮಗಳಿಂದ ಜನರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವದ ಪುನಃಸ್ಥಾಪನೆಯನ್ನು ಕೇಂದ್ರ ಸರ್ಕಾರ ತನ್ನ ಪಕ್ಷದ ಹಿತಾಸಕ್ತಿಗಿಂತ ಗೌಣವಾಗಿ ಕಂಡಿದ್ದು ರಾಜಕೀಯ ಪರಿಸ್ಥಿತಿ ಪೂರ್ಣ ಹದಗೆಡಲು ಕಾರಣವಾಗಿದೆ. ಆಡಳಿತಾತ್ಮಕ ಕ್ರಮಗಳು ಮಾತ್ರ ಇಂತಹ ಪರಿಣಾಮಕಾರಿಯಾಗವು ಎಂದು ರಾಜ್ಯ ಸಮಿತಿ ಎಚ್ಚರಿಸಿದೆ.

ಆಂಧ್ರ :

ಭೂಮಿಗಾಗಿ ಹೋರಾಟ

ಸೆಪ್ಟೆಂಬರ್ 1 ರಂದು ಕೃಷ್ಣಾ ಜಿಲ್ಲೆಯ ವಿಸ್ಸನ್ನ ಪೇಟೆಯಲ್ಲಿ ಸಾವಿರ ಜನ ಮಹಿಳೆಯರೂ ಸೇರಿದಂತೆ 10 ಸಾವಿರಕ್ಕಿಂತ ಹೆಚ್ಚು ಜನರು ಭಾರಿ ಅಭೂತ ಪೂರ್ವ ಪ್ರದರ್ಶನ ನಡೆಸಿದರು 1975ರಲ್ಲ ಪಟ್ಟಾ ಕೊಲ್ಲಲ್ಪಟ್ಟ ಭೂಒಡೆತನ ದೊರಕಿಸಿ ಕೊಡಲು ಮತ್ತು ಬಂಜರು ಭೂಮಿ ಹಂಚುವುದು ಮುಖ್ಯ ಬೇಡಿಕೆಗಳಾಗಿದ್ದವು.

ಈ ಹಿಂದೆ ಇದೇ ಪ್ರದೇಶದಲ್ಲಿ 13 ಕೇಂದ್ರಗಳಲ್ಲಿ ಸಂಘಟಿಸಲ್ಪಟ್ಟ 4000 ಎಕ್ರೆ ಕಾಡಿನ ಜಮೀನನ್ನು 600 ಬಡವರು, ಕೃಷಿ ಕೂಲಿಕಾರರು ಪಕ್ಷದ ನಾಯಕತ್ವದಲ್ಲಿ ಸ್ವಾಧೀನಪಡಿಸಿಕೊಂಡರು. ಜಾನಪದ ಕಲೆಗಳು ಕೆಂಪು ಬ್ಯಾನರು, ಭಿತ್ತಿ ಪತ್ರಗಳಿಂದ ಕೂಡಿದ ಪ್ರದರ್ಶನ ಚೇತೋಹಾರಿಯಾಗಿತ್ತು. ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಮಂಡಲ ರೆವಿನ್ಯೂ ಅಧಿಕಾರಿಗಳಿಗೆ ಸಲ್ಲಿಸಲಾಯಿತು. ಕೃಷ್ಣಾ ಜಿಲ್ಲೆಯಲ್ಲಿ ಬೇರೆ ಕಡೆ 412 ಬಡವರು 450 ಎಕ್ರೆ ಬಂಜರು ಭೂಮಿ ಆಕ್ರಮಿಸಿಕೊಂಡರು. ನೆಲ್ಲೂರು ಜಿಲ್ಲೆಯಲ್ಲಿ 200 ಬಡವರು 200 ಎಕ್ರೆ ಕರಿಕಂಟಿ ಜಮೀನು ನಾಲ್ಗೊಂಡಾ ಜಿಲ್ಲೆಯಲ್ಲಿ 300 ಜನರು 1200 ಎಕ್ರೆ ಬಂಜರು ಭೂಮಿ ವಶಪಡಿಸಿ ಕೊಂಡರು.

ಭೂಮಿಗಾಗಿ ನಡೆದಿರುವ ಈ ಹೋರಾಟಗಳು ಉಳಿದೆಡೆ ಹಳ್ಳಿಯ ಬಡವರನ್ನು ಭೂಮಿಯ ಹೋರಾಟಗಳಿಗೆ ಉತ್ತೇಜನ ನೀಡುವುದಲ್ಲದೆ ಬಡವರಿಗಿರುವ ಭೂಮಿಯ ಹಸಿವನ್ನು ಕಣ್ಣಿಗೆ ಕಟ್ಟುವಂತೆ ತೋರಿಸಿ ಕೊಟ್ಟಿದೆ.

ನಿಕರಾಗುವ ಜತೆ ಸೌಹಾರ್ದತೆಗೆ ಸಹಾಯಧನ

ವಿಜಯವಾಡದಲ್ಲಿ DYFI ರಚಿಸಿದ ನಿಕರಾಗುವ ಸೌಹಾರ್ದತಾ ಸಮಿತಿ ಜನರಿಂದ ಸಂಗ್ರಹಿಸಿದ ರೂ. 1,20,000 ಮತ್ತು ರೂ. 60,000 ಮೊತ್ತದ ಔಷಧಿ ವಸ್ತುಗಳನ್ನು ಭಾರತದಲ್ಲಿ ನಿಕರಾಗುವದ ರಾಯಭಾರಿ ಶ್ರೀಮತಿ ಹಲಿಮಾಸಿರ್ಕಾರ್‌ಗೆ ಅರ್ಪಿಸಿತು. ವಿಜಯವಾಡದ ಸುತ್ತಮುತ್ತಲು ನೆರೆ ಬಂದಿದ್ದು, ಭಾರಿ ಕಷ್ಟನಷ್ಟ ಉಂಟಾಗಿದ್ದರೂ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಸಹಾಯಧನ ಸಂಗ್ರಹಿಸಲಾಯಿತು. ಸಹಾಯಧನ ಅರ್ಪಿಸಲು ಏರ್ಪಡಿಸಿದ್ದ ಸಭೆ ಪ್ರಭಾವಪೂರ್ಣವಾಗಿತ್ತು. ಸೌಹಾರ್ದತಾ ಸಮಿತಿ ನಿಕರಾಗುವದಲ್ಲಿ ಶಾಂತಿ ಮರಳುವವರೆಗೆ ತನ್ನ ಕಾರ್ಯಕ್ರಮಗಳನ್ನು ಮುಂದುವರಿಸುವುದು ಎಂದು ಘೋಷಿಸಿತು. ಈ ಸಂದರ್ಭದಲ್ಲಿ ಪ್ರಜಾಶಕ್ತಿ ಬುಕ್‌ಹೌಸ್ ಪ್ರಕಟಿಸಿರುವ "ಚಿನ್ನ ದೇಶಂ-ಪೆದ್ದ ಸಂದೇಶಂ" (ಚಿಕ್ಕ ದೇಶ-ದೊಡ್ಡ ಸಂದೇಶ) ಎರಡನೇ ಮುದ್ರಣ ಕಂಡಿತು.

ಸಿ. ಐ. ಟಿ. ಯು. ರಾಜ್ಯ ಸಮಿತಿ ನಿರ್ಣಯಗಳು :

ಗೂರ್ಖಾಲ್ಯಾಂಡ್ ವಿರೋಧಿ ವಾರಾಚರಣೆ

ಸಿ ಐ ಟಿ ಯು ಕರ್ನಾಟಕ ರಾಜ್ಯ ಸಮಿತಿಯ ಏಳನೆಯ ಸಭೆಯು ಬೆಂಗಳೂರಿನಲ್ಲಿ 15-10-1985 ರಂದು ಎಸ್. ಸೂರ್ಯನಾರಾಯಣ ರಾವ್‌ರ ಅಧ್ಯಕ್ಷತೆಯಲ್ಲಿ ನಡೆಯಿತು

ಸಭೆಯು ಪ್ರಾರಂಭದಲ್ಲಿ ಅಗಲಿದ ಈರ್ವರು ಮುಖಂಡರಿಗೆ – ರಾಜ್ಯ ಸಮಿತಿಯ ಮಾಜಿ ಉಪಾಧ್ಯಕ್ಷ ಬಿ. ನಾರಾಯಣ ಮತ್ತು ರಾಜ್ಯ ಮಂಡಳಿಯ ಮಾಜಿ ಸದಸ್ಯ ಎನ್. ಪಿ. ಮದರ್ ಸಾಬ್‌ರವರಿಗೆ-ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಸ್ವೀಕರಿಸಿತು.

ಚೀನಾಕ್ಕೆ ಸಿ ಐ ಟಿ ಯುವಿನ ಐದನೆಯ ನಿಯೋಗವು ಭೇಟಿ ಕೊಟ್ಟುದರ ಕುರಿತು ನಿಯೋಗದ ಸದಸ್ಯರಾಗಿದ್ದ ಸಿ. ನಂಜುಂಡಪ್ಪನವರು ಸಭೆಗೆ ವರದಿ ಮಾಡಿದರು.

ಸೋವಿಯತ್ ಒಕ್ಕೂಟಕ್ಕೆ ಭೇಟಿ ಕೊಟ್ಟುದರ ಕುರಿತು ವಿ. ಜೆ. ಕೆ. ನಾಯರ್ ಸಭೆಗೆ ವರದಿ ಕೊಟ್ಟರು.

ಸೆಪ್ಟೆಂಬರ್ 24 ರಿಂದ 26ರ ವರೆಗೆ ನವದೆಹಲಿಯಲ್ಲಿ ನಡೆದ ಸಿ ಐ ಟಿ ಯು ಕಾರ್ಯಕಾರಿ ಸಮಿತಿಯ ಸಭೆಯ ಬಗ್ಗೆ ಎಸ್. ಸೂರ್ಯನಾರಾಯಣ ರಾವ್ ಸಭೆಗೆ ವರದಿ ಮಾಡಿದರು.

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ನಿನ ಸಮ್ಮೇಳನವನ್ನು ಮಂಗಳೂರಿನಲ್ಲಿ ನವೆಂಬರ್ 9 ರಿಂದ 11 ಕ್ಕೆ ಬದಲಾಗಿ 22 ರಿಂದ 24ರ ವರೆಗೆ ನಡೆಸಬೇಕೆಂದು ಸಭೆಯು ತೀರ್ಮಾನಿಸಿತು.

ದಕ್ಷಿಣ ವಲಯ ಬೀಡಿ ಕಾರ್ಮಿಕರ ಸಮನ್ವಯ ಸಮಿತಿಯ ಸಭೆಯನ್ನು 29-10-86 ರಂದು ಬೆಂಗಳೂರಿನಲ್ಲಿ ನಡೆಸುವ ಕುರಿತು ಮತ್ತು ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟದ ಕಾರ್ಯಕಾರಿ ಸಮಿತಿಯ ಸಭೆಯನ್ನು ನವಂಬರ್ 29, 30 ರಂದು ವೀರಾಜಪೇಟೆಯಲ್ಲಿ ನಡೆಸುವ ಕುರಿತು ಸಭೆಯು ವಿಚಾರ ಮಾಡಿ ಸಮ್ಮತಿಸಿತು.

ಅಕ್ಟೋಬರ್ 21, 22 ರಂದು ನವದೆಹಲಿಯಲ್ಲಿ ನಡೆಯುವ ಅಖಿಲ ಭಾರತ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಸಮಾವೇಶಕ್ಕೆ ಕರ್ನಾಟಕದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳು ಪ್ರತಿನಿಧಿಗಳನ್ನು ಕಳುಹಿಸುವುದನ್ನು ಸಭೆಯು ಗಮನಿಸಿತು.

"ಸಿ ಐ ಟಿ ಯು ಸಂದೇಶ"ದ ಬಗ್ಗೆ ವಿಚಾರ ಮಾಡಿದ ಸಭೆಯು ಹಿಂದಿನ ತೀರ್ಮಾನಗಳ ಪ್ರಕಾರ ಪ್ರಸಾರವನ್ನು ಹೆಚ್ಚಿಸಲು ಕರೆಕೊಟ್ಟಿತು.

ಇನ್ನೂ ಅನ್ಯೂಯಲ್ ರಿಟರ್ನ್ಸ್‌ಗಳನ್ನು ಕಳುಹಿಸದಿರುವ ಕಾರ್ಮಿಕ ಸಂಘಗಳು ಹದಿನೈದು ದಿವಸಗಳ ಒಳಗಾಗಿ ಅನ್ಯೂಯಲ್ ರಿಟರ್ನ್ಸ್ ಕಳುಹಿಸಬೇಕೆಂದೂ, ಸಿ ಐ ಟಿ ಯು ಅಫಿಲಿಯೇಷನ್ ಫೀ ಮತ್ತು ಚಂದಾಗಳನ್ನು ಪಾವತಿ ಮಾಡಬೇಕೆಂದೂ ಸಭೆಯು ನಿರ್ದೇಶಿಸಿತು.

ನಿಕರಾಗುವ ದೇಶದಲ್ಲಿ ನಡೆಯುತ್ತಿರುವ ಹೋರಾಟದ ಸಹಾಯಾರ್ಥ ನಿಧಿ ಸಂಗ್ರಹವನ್ನು ಪೂರೈಸಿ ನವಂಬರ್ 10ರ ಒಳಗಾಗಿ ರಾಜ್ಯ ಸಮಿತಿಗೆ ಕಳುಹಿಸಿಕೊಡಬೇಕೆಂದೂ ಸಭೆಯು ತೀರ್ಮಾನಿಸಿತು.

ಸನತ್ ಮೆಹತ ಸಮಿತಿಯ ಶಿಫಾರಸುಗಳಿಗೆ ಅನುಸಾರವಾಗಿ ಕೇಂದ್ರ ಸರ್ಕಾರವು ಇಂಡಿಯನ್ ಟ್ರೇಡ್ ಯೂನಿಯನ್ಸ್ ಆಕ್ಟ್ ಮತ್ತು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್ ಎಂಬ ಕಾಯಿದೆಗಳನ್ನು ತಿದ್ದುಪಡಿ ಮಾಡಿ ಕಾರ್ಮಿಕರ ಸಂಘಟನಾ ಹಕ್ಕು, ಸಾಮೂಹಿಕ ಚೌಕಾಸಿಯ ಹಕ್ಕು, ಮುಷ್ಕರದ ಹಕ್ಕು-ಇವೇ ಮೊದಲಾದ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಕಸಿದುಕೊಳ್ಳಲು ಹೊರಟಿರುವುದನ್ನು ಮತ್ತು ಕೈಗಾರಿಕಾ ಬಾಂಧವ್ಯಗಳ ಆಯೋಗವನ್ನು ರಚಿಸಿ ಕಾರ್ಮಿಕ ಇಲಾಖೆಯ ಸಂಧಾನ ಯಂತ್ರವನ್ನು ನಿರುಪಯುಕ್ತವನ್ನಾಗಿಸಿ ಕಾರ್ಮಿಕರ ದೂರುಗಳು ಅನೇಕ ವರ್ಷಗಳ ಕಾಲ ನ್ಯಾಯಾಲಯಗಳಲ್ಲಿ ಕೊಳೆಯುವಂತೆ ಮಾಡುವುದನ್ನು ವಿರೋಧಿಸಲು ಸಿ ಐ ಟಿ ಯು ಸಂಘಗಳು ಅಕ್ಟೋಬರ್ 31 ರಂದು ರಾಜ್ಯಾದ್ಯಂತ ಮೆರವಣಿಗೆ ಸಭೆಗಳನ್ನು ನಡೆಸಿ ಪ್ರತಿಭಟನಾ ದಿನವನ್ನು ಆಚರಿಸಬೇಕೆಂದು ರಾಜ್ಯ ಸಮಿತಿಯ ಸಭೆಯು ಕರೆಕೊಟ್ಟಿತು.

ಗೂರ್ಖಾಲ್ಯಾಂಡ್ ಚಳುವಳಿಯ ಅಪಾಯದ ಬಗ್ಗೆ ತಿಳುವಳಿಕೆ ಕೊಡಲು ಮತ್ತು ಈ ಚಳುವಳಿಯಲ್ಲಿ ಮನೆ ಕಳೆದು ಕೊಂಡಿರುವವರಿಗೆ ಮತ್ತು ಸಂತ್ರಸ್ತರಿಗೆ ಸಹಾಯ ಸಂಗ್ರಹ ಮಾಡಲು ಸಿ ಐ ಟಿ ಯು ಸಂಘಗಳು ನವೆಂಬರ್ 2ರಿಂದ 8ರ ವರೆಗೆ ಸಪ್ತಾಹವನ್ನು ಆಚರಿಸಲು ರಾಜ್ಯ ಸಮಿತಿಯು ಕರೆಕೊಟ್ಟಿತು.

ಗುಲ್ಬರ್ಗ ಜಿಲ್ಲೆ ಶಹಬಾದಿನಲ್ಲಿರುವ ಎ ಬಿ ಎಲ್ ಕಾರ್ಖಾನೆಯ ಕಾರ್ಮಿಕರು ಸೆಪ್ಟಂಬರ್ 1ರಿಂದ ನಡೆಸುತ್ತಿರುವ ಮುಷ್ಕರದಲ್ಲಿ ಮುಖ್ಯಮಂತ್ರಿಯವರು ಮಧ್ಯ ಪ್ರವೇಶ ಮಾಡಿ ವಿವಾದವನ್ನು ಇತ್ಯರ್ಥ ಮಾಡಬೇಕೆಂದೂ, ಪ್ರಾರಂಭವಾಗಲಿರುವ ಕಾರ್ಮಿಕ ಮುಖಂಡರ ಆಮರಣಾಂತ ಉಪವಾಸವನ್ನು ತಪ್ಪಿಸಬೇಕೆಂದೂ ಒತ್ತಾಯಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಬೆಂಗಳೂರಿನಲ್ಲಿ ಯು ಸೈ ಟಿ ಡ್ ಬ್ರೂವರೀಸ್‌ನಲ್ಲಿ ಕೈಗಾರಿಕಾ ಬಾಂಧವ್ಯವು ಹದಗೆಡುತ್ತಾ ಬಂದಿರುವುದನ್ನು ಗಮನಿಸಿದ ಸಭೆಯು ಆಡಳಿತ ಮಂಡಳಿಯ ದಬ್ಬಾಳಿಕೆಯ ವಿರುದ್ಧವಾಗಿ ಕಾರ್ಮಿಕರು ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸುವ ನಿರ್ಣಯವನ್ನು ಸಭೆಯು ಸ್ವೀಕರಿಸಿತು.

ಸರ್ಕಾರವು ನಿಗದಿ ಮಾಡಿರುವ ಕನಿಷ್ಟ ಕೂಲಿ ಮತ್ತು ತುಟ್ಟಿ ಭತ್ಯೆಯನ್ನು ಕೊಡಬೇಕೆಂದು ಒತ್ತಾಯಿಸಿ ಹಾಸನದಲ್ಲಿ ಮೂರು ಕಾಫಿ ಕ್ಯೂರಿಂಗ್ ಸಂಸ್ಥೆಗಳ ಕಾರ್ಮಿಕರು ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಿದ ಸಭೆಯು ಮುಷ್ಕರ ಪ್ರಾರಂಭವಾಗಿ ಹಾಸನದ ಡೆಪ್ಯುಟಿ ಲೇಬರ್ ಕಮೀಷನರ್ ಮತ್ತು ಕಾರ್ಮಿಕ ಅಧಿಕಾರಿಗಳಿಬ್ಬರೂ ಊರಲ್ಲಿಲ್ಲದೆ ಹೋಗಿರುವುದನ್ನು ಸಭೆಯು ಖಂಡಿಸುವ ನಿರ್ಣಯವನ್ನು ಅಂಗೀಕರಿಸಿತು.

ಸಭೆಯು ಮಾಡಿರುವ ಎಲ್ಲಾ ತೀರ್ಮಾನಗಳನ್ನು ಕಾರ್ಯಗತ ಮಾಡಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಬೇಕೆಂದು ಅಧ್ಯಕ್ಷರು ಮನವಿ ಮಾಡಿಕೊಂಡ ನಂತರ ಸಭೆಯು ಮುಕ್ತಾಯವಾಯಿತು.

○

ಆರ್. ಓ. ಸಿ. ಕಾರ್ಮಿಕರ 120 ದಿನಗಳ ಸತ್ಯಾಗ್ರಹ

ರಾಯಚೂರು ಜಿಲ್ಲೆಯಲ್ಲಿ ಈಗಾಗಲೇ ಶೇ. 50 ರಷ್ಟು ಕಾರ್ಖಾನೆಗಳು ಬಂಡವಾಳದ, ಮಾರುಕಟ್ಟೆಯ ಕೊರತೆಯಿಂದ ಅಧಿಕಾರಿಗಳ ಭ್ರಷ್ಟಾಚಾರದಿಂದ, ಆಡಳಿತ ವರ್ಗದ ಒಳಜಗಳಗಳಿಂದಾಗಿ ಮುಚ್ಚುತ್ತಲಿವೆ. ರಾಯಚೂರು ನಗರದ ಕೈಗಾರಿಕಾ ಪ್ರದೇಶವು ಚಟುವಟಿಕೆಯಿಲ್ಲದೆ ಬಿಕೋ ಎನ್ನುತ್ತಿದೆ. ಈ ಹಿನ್ನೆಲೆಯಲ್ಲಿ ರಾಯಚೂರಿನ ಹೈದರಾಬಾದ್ ರೋಡಿನಲ್ಲಿರುವ 3 ಕೋಟಿ ಬಂಡವಾಳದಿಂದ ಸ್ಥಾಪಿಸಲಾಗಿರುವ ಎಣ್ಣೆ, ಡಾಲ್ಡಾ, ಪಶು ಆಹಾರವನ್ನು ಉತ್ಪಾದಿಸುವ ರಾಯಚೂರು ಆಯಿಲ್ ಕಾಂಪ್ಲೆಕ್ಸ್ ಕಾರ್ಖಾನೆಯನ್ನು ಮುಚ್ಚಿ ಆರು ತಿಂಗಳುಗಳು ಕಳೆದಿವೆ. ಈ ಕಾರ್ಖಾನೆಯಲ್ಲಿ 48 ಲಕ್ಷ ರೂಪಾಯಿಗಳ ಭ್ರಷ್ಟಾಚಾರ ನಡೆದಿರುವುದೇ ಅಲ್ಲದೆ ಕೆಲವು ಅಧಿಕಾರಿಗಳ ಮೇಲೆ ಮೊಖದ್ದಮೆ ಹೂಡಲಾಗಿದೆ. ಆರು ತಿಂಗಳ ಹಿಂದೆ ಆಡಳಿತ ವರ್ಗ ಯಾವುದೇ ಸಕಾರಣ ಕೊಡದೆ 49 ಖಾಯಂ ಕಾರ್ಮಿಕರನ್ನು ವಜಾ ಮಾಡಿದೆ ಇದನ್ನು. ಪ್ರತಿಭಟಿಸಿ 120 ದಿನಗಳಿಂದ ಅಲ್ಲಿನ ಕಾರ್ಮಿಕರು ಸರದಿ ಉಪವಾಸ ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ. ಈ ಅಕ್ರಮ ವಜಾದ ಬಗ್ಗೆ ಹೈಕೋರ್ಟಿನಿಂದ ತಡೆಯಾಜ್ಞೆಯನ್ನು ತರಲಾಗಿದ್ದರೂ ಕೂಡ ಮಾಲಿಕರು ಈ ಬಗ್ಗೆ ಏನೂ ಮಾಡಿಲ್ಲ. ಈ ಮಧ್ಯೆ ಕಾರ್ಖಾನೆಯನ್ನು ಕೇಂದ್ರ ಸರಕಾರದ ನ್ಯಾಫೆಡ್ ಸಂಸ್ಥೆಗೆ ವರ್ಗಾಯಿಸಲಾಯಿತು. ಆದರೆ ಖಾಸಗಿ ಕಂಪೆನಿ ಮಾಲೀಕರೊಬ್ಬರು ತಮಗೆ ಕೊಡಬೇಕಾಗಿದ್ದ ಕಾರ್ಖಾನೆಯನ್ನು ನ್ಯಾಫೆಡ್ ಸಂಸ್ಥೆಗೆ ಕೊಟ್ಟಿರುವುದು ಅನ್ಯಾಯವೆಂದು ಹೇಳಿ ಹೈಕೋರ್ಟಿನಿಂದ ತಡೆಯಾಜ್ಞೆ ತಂದಿದ್ದಾರೆ. ಇದರಿಂದ ಕಾರ್ಖಾನೆಯ ತೆರೆಯುವಿಕೆ ಇನ್ನೂ ವಿಳಂಬವಾಗಿದೆ. ಕಾರ್ಮಿಕ ಪರವಾಗಿದ್ದ ತಡೆಯಾಜ್ಞೆಯನ್ನು ಕಸದ ಬುಟ್ಟಿಗೆ ಎಸೆದು ಮಾಲಕರ ಪರವಾದ ತಡೆಯಾಜ್ಞೆಯನ್ನು ಊರ್ಜಿತಗೊಳಿಸಿರುವ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಸಂಘವು ಉಗ್ರವಾಗಿ ಖಂಡಿಸಿದೆ.

ಹೋರಾಟ ಮುಂದುವರಿಯುತ್ತಿದೆ, ದಿನದಿಂದ ದಿನಕ್ಕೆ ಕಾರ್ಮಿಕರ ಪರಿಸ್ಥಿತಿ ಹದಗೆಡುತ್ತಿದೆ. ಕಾರ್ಖಾನೆಯನ್ನು ಶೀಘ್ರವಾಗಿ ತೆಗೆಯಬೇಕೆಂದು ಒತ್ತಾಯಿಸಿ ಅಕ್ಟೋಬರ್ 4 ರಿಂದ ಕಾರ್ಖಾನೆಯ ಅಧಿಕಾರಿಗಳು ಕಾರ್ಖಾನೆಯನ್ನು ಪ್ರವೇಶಿಸದಂತೆ ತಡೆಯುವ ಕಾರ್ಯಕ್ರಮ ಪ್ರಾರಂಭವಾಗಿದೆ. ಈ ಹೋರಾಟಕ್ಕೆ ಇತರ ದುಡಿಯುವ ವರ್ಗ ಸಹಾಯ - ಸಹಕಾರ ನೀಡಬೇಕೆಂದು ಸಂಘವು ವಿನಂತಿಸಿಕೊಂಡಿದೆ

●

ಪೋಲೀಸ್ ದೌರ್ಜನ್ಯಕ್ಕೆ ಖಂಡನೆ

ಉಡುಪಿ ತಾಲ್ಲೂಕಿನ ಚೇರ್ಕಾಡಿ ಗ್ರಾಮ ರೈತ ಸಂಘದ ಅಧ್ಯಕ್ಷರಾದ ಕಾ. ಸಂಜೀವ ಆಚಾರಿಯವರ ಮೇಲೆ ಬ್ರಹ್ಮಾವರ ಠಾಣೆಯ ಪೋಲೀಸ್ ಅಧಿಕಾರಿ ಪೇಕ್ರಿಯಾ ಪೇಟೆಯಲ್ಲಿ ಬಹಿರಂಗವಾಗಿ ಧಾಳಿ ಮಾಡಿದ್ದನ್ನು ಖಂಡಿಸಲು ಅಕ್ಟೋಬರ್ 4 ರಂದು ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾ. ಡೇವಿಡ್ ಕರ್ಕಡ ವಹಿಸಿದ್ದರು. ಸಿ.ಪಿ.ಐ.(ಎಂ)ನ ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಕಾ. ಪಿ. ರಾಮಚಂದ್ರರಾವ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ, ಹಳ್ಳಿ ಹಳ್ಳಿಗಳಲ್ಲಿ ಬೆಳೆದು ಹಬ್ಬುತ್ತಿರುವ ರೈತ ಸಂಘದ ಪ್ರಭಾವದಿಂದಾಗಿ ಭೀತಗೊಂಡಿರುವ ಭೂಮಾಲಿಕರು ಹಾಗೂ ಶ್ರೀಮಂತರು ಪೋಲೀಸರ ನೆರವಿನಿಂದ ರೈತ ಸಂಘದ ಮುಂದಾಳುಗಳ ಮೇಲೆ ಹಲ್ಲೆ ನಡೆಸುವುದನ್ನು ಉಗ್ರವಾಗಿ ಖಂಡಿಸಿದರು,

ಸಿ.ಪಿ.ಐ (ಎಂ)ನ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ. ಕೆ. ಆರ್. ಶ್ರೀಯಾನ್‌ರವರು ಪೋಲೀಸರ ದಬ್ಬಾಳಿಕೆಯನ್ನು ಖಂಡಿಸಿ ಇದರ ವಿರುದ್ಧ ಜನತೆ ಪ್ರಬಲ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಕೊನೆಯಲ್ಲಿ ಕಾ. ಸಂಜೀವ ಆಚಾರಿಯವರು ಧನ್ಯವಾದ ಸಲ್ಲಿಸಿ ಮಾತನಾಡಿದರು.

ಚಿಲಿಯ ಪ್ರತಿಕ್ರಾಂತಿ : ಅಂತರ್ರಾಷ್ಟ್ರೀಯ ಚಳುವಳಿ ಕಲಿತ ಪಾಠ

ದಕ್ಷಿಣ ಅಮೇರಿಕಾದ ತುತ್ತತುದಿಯಲ್ಲಿರುವ ರಾಷ್ಟ್ರ ಚಿಲಿಯಲ್ಲಿ ಸೈನಿಕ ಕ್ಷಿಪ್ರಕ್ರಾಂತಿ ನಡೆದು ಅಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾಗಿದ್ದ ಅಧ್ಯಕ್ಷ ಸಾಲ್ವಡೋರ್ ಅಲ್ಲೆಂಡೆಯವರ ಕೊಲೆಯಾಗಿ ಹದಿಮೂರು ವರ್ಷಗಳು ಗತಿಸಿವೆ. ಅಧ್ಯಕ್ಷ ಅಲ್ಲೆಂಡೆ ತನ್ನ ದೇಶದ ಜನತೆ ತನ್ನನ್ನು ಅಧ್ಯಕ್ಷನನ್ನಾಗಿ ಆರಿಸುವಾಗ ಹೊರಿಸಿದ್ದ ಹೊಣೆಗಾರಿಕೆಯಿಂದ ತಾನು ತಪ್ಪಿಸಿಕೊಳ್ಳಲಾರೆ; ಈ ಕರ್ತವ್ಯವನ್ನು ನಿಭಾಯಿಸುವ ಸಲುವಾಗಿ ತನ್ನ ಪ್ರಾಣವನ್ನೇ ಮುಡಿಪಾಗಿಟ್ಟು ಹೋರಾಡುವೆನೆಂದು ಕೊಟ್ಟ ಮಾತಿಗೆ ಅನುಗುಣವಾಗಿ ಸಿ.ಐ.ಎ. ಬೆಂಬಲಿತ ಸೈನಿಕ ದಂಗೆಕೋರರ ವಿರುದ್ಧ ಹೋರಾಡಿ ಪ್ರಾಣಾರ್ಪಣೆ ಮಾಡಿದರು. ಅಂತರರಾಷ್ಟ್ರೀಯ ಖ್ಯಾತಿಯ ಪತ್ರಕರ್ತ ಅಗಸ್ಟೋ ಒಲಿವಾರಿಸ್ ಅಲ್ಲೆಂಡೆಯವರ ಜೊತೆಗೇ ದಂಗೆಕೋರರ ವಿರುದ್ಧ ಹೋರಾಡಿ ಹುತಾತ್ಮರಾದರು.

ಸಾಮ್ರಾಜ್ಯಶಾಹಿಗಳು ಜಗತ್ತಿನ ಕ್ರಾಂತಿಕಾರಿ ಚಳುವಳಿಯ ಹುಟ್ಟಡಗಿಸಲು ಪ್ರಯಾಸಪಟ್ಟಷ್ಟೂ ಕ್ರಾಂತಿಕಾರಿ ಹೋರಾಟಗಳು ಚಿಗುರುತ್ತಿವೆ. ಚಿಲಿಯಲ್ಲಿ *1973* ರಲ್ಲಿ ಸಿ. ಐ. ಎ. ಪ್ರತಿಕ್ರಾಂತಿಯನ್ನು ಸೃಷ್ಟಿಮಾಡಿ ಚುನಾಯಿತ ಎಡ ಸರಕಾರವನ್ನು ಉರುಳಿಸಿದರು ನಿಜ.
ಚಿಲಿಯ ಈ ಕ್ರೂರ ಸರ್ವಾಧಿಕಾರಿಯ ವಿರುದ್ಧ ಇಂದು ಹೋರಾಟ ಪುಟಿದೇಳುತ್ತಿದೆ. ಯಾವ ಶಕ್ತಿಯೂ ಅದನ್ನು ತಡೆಯುವುದು ಸಾಧ್ಯವಿಲ್ಲ.

'ಕುದಿಯುತಿದೆ

ಚಿಲಿಯಲ್ಲಿ ನಡೆದ ಈ ಪ್ರತಿಕ್ರಾಂತಿಯ ಬಳಿಕ ಕೆಲವೇ ದಿನಗಳಲ್ಲಿ ಚಿಲಿಯ ಖ್ಯಾತ ನೋಬೆಲ್ ಪ್ರಶಸ್ತಿ ವಿಜೇತ ಕವಿ ಪಾಬ್ಲೋ ನೆರುದಾ ಸಾಂಟಿಯಾಗೋದ ಆಸ್ಪತ್ರೆಯೊಂದರಲ್ಲಿ ಮರಣ ಹೊಂದಿದರು. ಚಿಲಿಯಲ್ಲಿ ಫ್ಯಾಸಿಸ್ಟರು ನಡೆಸಿದ್ದ ಬರ್ಬರ ಕೃತ್ಯದಿಂದ ನೆರುದಾ ಸಾಕಷ್ಟು ನೊಂದಿದ್ದರು. ನೆರುದಾ ಅವರ ಮನೆಗೆ ಫ್ಯಾಸಿಸ್ಟರು ಧಾಳಿ ನಡೆಸಿ ಅವರನ್ನು ಕೊಲ್ಲುವ ಪ್ರಯತ್ನವನ್ನು ಈ ಮೊದಲೇ ನಡೆಸಿದ್ದರು. ನೆರುದಾ ಅವರ ಮನೆಯನ್ನು ನಾಶಮಾಡಿ ಅವರ ಪುಸ್ತಕಗಳಿಗೆ ಬೆಂಕಿ ಹಚ್ಚಿದ ಫ್ಯಾಸಿಸ್ಟರಿಗೆ ಈ ಕ್ರಾಂತಿಕಾರಿ ಕವಿಯ ಸ್ವರವನ್ನು ಅಡಗಿಸಲಾಗಲಿಲ್ಲ. ತಾನ ಸಾಯುವ ಕೆಲವೇ ದಿನಗಳ ಮೊದಲು ನೆರುದಾ ತನ್ನ ಪುಸ್ತಕವೊಂದರ ಪ್ರಸ್ತಾವನೆಯಲ್ಲಿ ಆಡಿದ ಮಾತು ಮಾತುಗಳಿವು :

"ನನಗೀಗ ಬೇರೆದಾರಿ ಇಲ್ಲ. ನನ್ನ ಜನತೆಯ ಶತ್ರುಗಳ ವಿರುದ್ಧ ನನ್ನ ಗೀತೆಗಳ ಮೂಲಕ ನಾನು ಸೆಣಸುತ್ತೇನೆ. ಈ ಆಯುಧ ಆಣಕುವಾದ ಬಂಡೆಯಂತೆ ಗಟ್ಟಿಯಾಗಿದೆ."

"ನಾನು ವಹಿಸಲಿರುವ ಪಾತ್ರ ಕ್ಷಣಿಕವಾಗಿರಬಹುದು. ಆದರೆ ನಾನದನ್ನು ನಿರ್ವಹಿಸಲು ಸಿದ್ಧ. ನಾನು ಬಳಸುವ ಶಸ್ತ್ರ ಬಹು ಪುರಾತನ ಕಾಲದಿಂದಲೂ ಬಳಕೆಯಲ್ಲಿರುವ ಆಯುಧ. ನನ್ನ ಶತ್ರುವನ್ನು ನಾಶಗೊಳಿಸಲು ಕಾವ್ಯ, ಹಾಡು ಮತ್ತು ಕರಪತ್ರಗಳನ್ನು ಬಳಸುತ್ತೇನೆ." ಎಂದಿದ್ದಾರೆ.

ನವಂಬರ್ 1970ರಲ್ಲಿ ಚುನಾವಣೆಗಳ ಮೂಲಕ ಅಧಿಕಾರಕ್ಕೆ ಬಂದ ಚಿಲಿಯ ಪಾಪ್ಯುಲರ್ ಯುನಿಟಿ ಬ್ಲಾಕ್ ಕಮ್ಯುನಿಸ್ಟರು, ಸೋಶಿಯಲಿಸ್ಟ್ ಪಕ್ಷ ಮತ್ತಿತರ ಕ್ರಾಂತಿಕಾರಿ ಶಕ್ತಿಗಳ ಒಕ್ಕೂಟವಾಗಿತ್ತು. ಈ ಸಂಯುಕ್ತರಂಗಕ್ಕೆ ಸಂಸತ್ತಿನಲ್ಲಿ ಬಹುಮತವಿಲ್ಲವಿದ್ದರೂ ಈ ರಂಗದ ನಾಯಕ ಸಾಲ್ವಡೋರ್ ಅಲ್ಲೆಂಡೆ ಜನತೆ ನೀಡಿದ ಅಪಾರ ಬಹುಮತದಿಂದ ಅಧ್ಯಕ್ಷರಾಗಿ ಚುನಾಯಿತರಾದರು. ಪಾರ್ಲಿಮೆಂಟಿನಲ್ಲಿ ಕ್ರಿಶ್ಚಿಯನ್ ಡೆಮೊಕ್ರಟರು, ಪೆಟ್ರಿಯೊಯ್ ಲಿಬರ್ಟಾಡ್ ಮತ್ತು ನ್ಯಾಶನಲಿಸ್ಟ್ ಪಾರ್ಟಿ ಮತ್ತಿತರ ಬಲಪಂಥೀಯ ಪ್ರತಿಗಾಮಿ ಪಕ್ಷಗಳ ಒಕ್ಕೂಟ ಬಹುಮತ ಪಡೆದಿತ್ತು. ತಾನು ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಅಲ್ಲೆಂಡೆಯವರ ನೇತೃತ್ವದ ಸರಕಾರ ಹಲವಾರು ಪುರೋಗಾಮಿ ಕಾರ್ಯಕ್ರಮಗಳನ್ನು ಜ್ಯಾರಿಗೆ ತಂದುದಲ್ಲದೆ ಸಮಾಜವಾದಿ ರಾಷ್ಟ್ರಗಳಾದ ಕ್ಯೂಬಾ, ಸೋವಿಯತ್ ಒಕ್ಕೂಟ ಮೊದಲಾದುವುಗಳ ಜೊತೆ ರಾಜತಾಂತ್ರಿಕ ಸಂಬಂಧ ಸ್ಥಾಪಿಸಿಕೊಂಡಿತು. ಕಾರ್ಮಿಕ ವರ್ಗದ ವೇತನವನ್ನು ಶೇ 66ರಷ್ಟು ಹೆಚ್ಚಿಸಲಾಕಲ್ಲದೆ ಮಹಿಳೆಯರಿಗೆ ಪುರುಷರಂತೆ ಸಮಾನ ವೇತನ ನೀಡಲಾಯಿತು. ಬೃಹತ್ ಉದ್ಯಮಗಳನ್ನು ರಾಷ್ಟ್ರೀಕರಿಸಲಾಯಿತು. ಚಿಲಿಯ ಅತಿ ದೊಡ್ಡ ಸಂಪತ್ತಾಗಿರುವ ತಾಮ್ರದ ಗಣಿಗಳ ಮೇಲೆ ಒಡೆತನ ಹೊಂದಿದ್ದ ಅಮೇರಿಕಾದ ದೈತ್ಯಗಾತ್ರದ ಕಂಪೆನಿಗಳಾದ 'ಕೆನೆಕಾಟ್' ಮತ್ತು 'ಅನಾಕೊಂಡಾ'ಗಳ ಕೈಯಿಂದ ಈ ಗಣಿಗಳನ್ನು ಕಿತ್ತುಕೊಂಡು ರಾಷ್ಟ್ರೀಕರಣ ಮಾಡಲಾಯಿತು.

(7ನೇ ಪುಟ ನೋಡಿ)

" ನಾವು ಗೆಲ್ಲಬಲ್ಲೆವು - ನಾವು ಗೆಲ್ಲಲೇ ಬೇಕು "

ಮಾರ್ಚ್ 28, 1985. ಚಿಲಿಯ ಒಬ್ಬ ಪ್ರಸಿದ್ಧ ಕಲಾವಿದ ಸ್ಯಾಂಟಿಯಾಗೋ ನಾಸ್ಸಿನೋ ಡಾಕ್ಟರನ್ನು ಕಾಣಲೆಂದು ಹೋದಾತ ಮನೆಗೆ ಮರಳಲಿಲ್ಲ.

ಮಾರ್ಚ್ 29. ಚಿಲಿ ಅಧ್ಯಾಪಕ ಸಂಘದ ಸ್ಯಾಂಟಿಯಾಗೋ ಘಟಕದ ಅಧ್ಯಕ್ಷ ಮ್ಯಾನುವೆಲ್ ಗ್ವೆರೇರೊ ಮತ್ತು ಒಬ್ಬ ನೌಕರ ಜೋಸ್ ಪರಾಡಾ ತಮ್ಮ ಮಕ್ಕಳ ಶಾಲೆಯ ಹೆಬ್ಬಾಗಿಲ ಬಳಿ ಸಬ್ ಮೆಶಿನ್ ಗನ್ ಸಜ್ಜಿತರಾದ ಮೂರು ಮಂದಿಯಿಂದ ಅಪಹರಿಸಲ್ಪಟ್ಟರು

ಮಾರ್ಚ್ 30. ಸ್ಯಾಂಡಿಯಾಗೋ ನಗರದ ಉತ್ತರ ಅಂಚಿನಲ್ಲಿ ರಸ್ತೆಯ ಬದಿ ಈ ಮೂರು ಮಂದಿಯ ಕುತ್ತಿಗೆ ಕೊಯ್ಯಲ್ಪಟ್ಟ ಶವಗಳು ಕಾಣಿಸಿದವು ಸಾರ್ವಜನಿಕ ಒತ್ತಡದಿಂದಾಗಿ ನಡೆಸಲೇ ಬೇಕಾಗಿ ಬಂದ ವಿಚಾರಣೆಯಿಂದ ಸಾಬೀತಾದ ಅಂಶಗಳೆಂದರೆ ಈ ಭೀಕರ ಕೊಲೆ ನಡೆಸಿದವರು ಚಿಲಿ ಆಡಳಿತದ ಸಶಸ್ತ್ರ ಪೋಲೀಸ್ ಪಡೆಯಾದ ಕ್ಯಾರೇಬಿನೆರೋ. ಕೇಸು ಸುಪ್ರಿಂ ಕೋರ್ಟಿಗೆ ಹೋಯಿತು, "ಸಾಕ್ಷಿಗಳ ಅಭಾವ" ದಿಂದ ಸುಪ್ರೀಂ ಕೋರ್ಟ್ ದಾವೆಯನ್ನು ತಳ್ಳಿ ಹಾಕಿತು !

ಚಿಲಿಯಲ್ಲಿ ಕಳೆದ 13 ವರ್ಷಗಳಲ್ಲಿ ಅವ್ಯಾಹತವಾಗಿ ನಡೆದು ಬಂದಿರುವ ಘಟನೆಗಳಲ್ಲಿ ಇದೊಂದು. ಪಿನೋಚೆ ಸರ್ವಾಧಿಕಾರದ 13 ವರ್ಷಗಳ ಸಾಧನೆಗಳ ಪಟ್ಟಿಯನ್ನು ನೋಡಿ :

40 ಸಾವಿರಕ್ಕೂ ಹೆಚ್ಚು ಮಂದಿ ಕೊಲ್ಲಲ್ಪಟ್ಟಿದ್ದಾರೆ. ಮೂರು ಸಾವಿರಕ್ಕೂ ಹೆಚ್ಚು ಮಂದಿ "ಕಾಣೆ" ಯಾಗಿದ್ದಾರೆ. ಹತ್ತು ಲಕ್ಷಕ್ಕೂ ಹೆಚ್ಚು ಮಂದಿಯನ್ನು ದೇಶ ಭ್ರಷ್ಟ ಗೊಳಿಸಲಾಗಿದೆ. ನಿರುದ್ಯೋಗಿಗಳ ಸಂಖ್ಯೆ 12 ಲಕ್ಷ, ಕೈಗಾರಿಕೋತ್ಪಾದನೆ ಅರ್ಧಕ್ಕಿಳಿದಿದೆ. ಬಡತನ ಆರು ಪಟ್ಟು ಹೆಚ್ಚಿದೆ; ವಿದೇಶಿ ಬ್ಯಾಂಕುಗಳಲ್ಲಿ ಸರ್ವಾಧಿಕಾರಿಯವರ ಆಸ್ತಿಗಳ ಮೊತ್ತ ಶತಕೋಟಿ ಡಾಲರ್ ಮೀರಿದೆ

ನೆರೆಯ ಅರ್ಜೆಂಟಿನಾ, ಬ್ರಝಿಲ್ ಹಾಗೂ ಉರುಗ್ವೆಗಳಲ್ಲಿ ಮಿಲಟರಿ ಸರ್ವಾಧಿಕಾರ ಕೊನೆ ಗೊಳ್ಳುತ್ತಿರುವಾಗಲೂ 70 ವರ್ಷ ವಯಸ್ಸಿನ ಈ ಸರ್ವಾಧಿಕಾರಿ ತನ್ನ ಫ್ಯಾಸಿಸ್ಟ ಆಡಳಿತದ ಈ "ಸಾಧನೆ" ಗಳ ಆಧಾರದ ಮೇಲೆ 1997 ರ ವರೆಗೂ ಆಳುವ ಹಗಲು ಗನಸು ಕಾಣುತ್ತಿದ್ದಾನೆ.

ಆತನ ಫ್ಯಾಸಿಸ್ಟ ಕನಸನ್ನು ನುಚ್ಚು ನೂರಾಗಿಸಲು ಈಗ ಚಿಲಿಯ ಜನತೆ ಪಣತೊಟ್ಟಂತೆ ಕಾಣುತ್ತಿದೆ. ಈ ವರ್ಷದ ಏಪ್ರಿಲ್ - ಮೇ ತಿಂಗಳುಗಳಲ್ಲಿ ವ್ಯಾಪಕ ಜನ ವಿಭಾಗಗಳು ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ಸೇರಿ ಕೊಂಡಿವೆ. ಪಿನೋಚೆಯನ್ನು ಅಧಿಕಾರಕ್ಕೆ ತಂದ ಅಮೇರಿಕನ್ ಆಳುವ ವಲಯಗಳೂ ಕೂಡಾ ತಮ್ಮ ಈ ಬಂಟನ ಕರ್ಮಕಾಂಡಗಳ ಬಗ್ಗೆ ಅತೃಪ್ತಿ ಸೂಚಿಸಬೇಕಾಗಿ ಬಂದಿದೆ. ತಮ್ಮ ಅಂತರ್ರಾಷ್ಟ್ರೀಯ ಭಯೋತ್ಪಾದಕ ನೀತಿಯ ಈ ಕರಾಳ ಉದಾಹರಣೆಯನ್ನು ಅವರು ಸಮರ್ಥಿಸಿಕೊಳ್ಳುವಂತಿಲ್ಲ. ಅತ್ತ ಆತನ ಕೈಬಿಟ್ಟು ಫಿಲಿಪೈನ್ಸ್‌ನ ಇತ್ತೀಚಿನ ಅನುಭವದ ಲಾಭ ಪಡೆಯುವ ಮಂತೆಯೂ ಇಲ್ಲ. ಯಾಕೆಂದರೆ ಚಿಲಿಯಲ್ಲಿ ಸರ್ವಾಧಿಕಾರದ ವಿರುದ್ಧ ಹೋರಾಟದ ಮುಂಚೂಣಿಯಲ್ಲಿರುವ ಪ್ರಮುಖ ಶಕ್ತಿಗಳೆಂದರೆ ಚಿಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡಶಕ್ತಿಗಳು. ಈ ಕಾರಣದಿಂದಲೇ ಚಿಲಿಯ ಎಲ್ಲಾ ವಿರೋಧ ಪಕ್ಷಗಳು ಒಟ್ಟಾಗುವುದನ್ನು ತಡೆಯಲು ಅಮೇರಿಕನ್ ಆಳುವ ವಲಯಗಳು ಸರ್ವ ಪ್ರಯತ್ನ ನಡೆಸಿ ಇತ್ತೀಚಿನವರೆಗೆ ಸ್ವಲ್ಪಮಟ್ಟಿನ ಯಶಸ್ಸು ಕೂಡಾ ಪಡೆದಿದ್ದವು.

ಆದರೆ ಈಗ ಪರಿಸ್ಥಿತಿ ಬದಲಾಗುತ್ತಿದೆ, ಹದಿಮೂರು ವರ್ಷಗಳ ಕಟು ಅನುಭವ ವ್ಯಾಪಕ ಐಕ್ಯತೆಯ ಅನಿವಾರ್ಯತೆಯನ್ನು ಮನದಟ್ಟುಮಾಡಿಸಿದೆ

ಚಿಲಿಯ ಕಾರ್ಮಿಕರ, ರೈತರ, ವಿದ್ಯಾರ್ಥಿಗಳ, ಅಧ್ಯಾಪಕರ, ಕಲಾವಿದರ ಸುಮಾರು 250 ಸಾರ್ವಜನಿಕ ಸಂಘಟನೆಗಳು ಒಟ್ಟಾಗಿ "ರಾಷ್ಟ್ರೀಯ ನಾಗರಿಕ ಸಭೆ" (ಸಿವಿಲ್ ಅಸೆಂಬ್ಲಿ) ಸ್ಥಾಪಿಸಿ ಕೊಂಡು "ಚಿಲಿ ಒತ್ತಾಯಿಸುತ್ತಿದೆ" ಎಂಬ ಒಂದು ದಸ್ತಾವೇಜನ್ನು ಅಂಗೀಕರಿಸಿದವು. ಇದಕ್ಕೆ ಉತ್ತರವಾಗಿ ಪಿನೋಚೆ ದಮನಕಾಂಡವನ್ನು ತೀವ್ರಗೊಳಿಸಿದಾಗ ಸಭೆ ಸಾಮೂಹಿಕ ಕಾರ್ಯಾಚರಣೆಯ ಕಾರ್ಯಕ್ರಮವನ್ನು ರೂಪಿಸಿತು. ಈ ಜಂಟೀ ಕಾರ್ಯಾಚರಣೆಯ ಒಪ್ಪಂದಕ್ಕೆ ಹದಿಮೂರು ವರ್ಷಗಳ ಫ್ಯಾಸಿಸ್ಟ ಆಳ್ವಿಕೆಯಲ್ಲಿ ಮೊದಲ ಬಾರಿಗೆ ಚಿಲಿಯ ಎಲ್ಲಾ ರಾಜಕೀಯ ಪಕ್ಷಗಳೂ ಸಹಿ ಹಾಕಿದವು.

ಜೂನ್ ತಿಂಗಳಲ್ಲಿ ಚಿಲಿಯ ಜನತೆ "ಕಾನೂನುಭಂಗಮಾಸಾಚರಣೆ" ಎಂದು ಎಲ್ಲಾ ವಿರೋಧ ಪಕ್ಷಗಳ ಜಂಟಿ ಕರೆಯ ಮೇರೆಗೆ ಅತ್ಯಂತ ಯಶಸ್ವಿಯಾಗಿ ಆಚರಿಸಿತು. ಅಂದಿನಿಂದ ಸಾಮೂಹಿಕ ಕಾರ್ಯಾಚರಣೆ ದಿನೇದಿನೇ ಹೆಚ್ಚೆಚ್ಚು ವ್ಯಾಪಕಗೊಳ್ಳುತಿದೆ. ಜುಲೈ 2 ಹಾಗೂ 3 ರಂದು ಫ್ಯಾಸಿಸ್ಟ ಪ್ರತಿಕ್ರಾಂತಿಯ ನಂತರ ಪ್ರಥಮ ಬಾರಿಗೆ ರಾಷ್ಟ್ರವ್ಯಾಪಿ ರಾಜಕೀಯ ಮುಷ್ಕರ ನಡೆಯಿತು. 48 ಗಂಟೆಗಳ ಕಾಲ ದೇಶಾದ್ಯಂತ ಜನಜೀವನ ಸಂಪೂರ್ಣವಾಗಿ ಸ್ತಬ್ಧಗೊಂಡಿತು. ಮುಷ್ಕರ ಮುರಿಯಲು ಪಿನೋಚೆ ತನ್ನ ಎಲ್ಲಾ ಸಶಸ್ತ್ರ ಪಡೆಗಳನ್ನು ಲಂಗುಲಗಾಮಿಲ್ಲದೆ ಬಳಸಿದ್ದ. ಇತ್ತೀಚೆಗೆ ತನ್ನ ಹತ್ಯೆಯ ಪ್ರಯತ್ನದ ನೆವವೊಡ್ಡಿ ದಮನಕಾಂಡವನ್ನು ಇನ್ನಷ್ಟು ತೀವ್ರಗೊಳಿಸಿದ್ದಾನೆ. ಆದರೆ ಈ ಹದಿಮೂರು ವರ್ಷಗಳ ಕಾಲ ಅಮಾನುಷ ಚಿತ್ರಹಿಂಸೆ, ಕೊಲೆ-ಸುಲಿಗೆಗಳನ್ನು ಕಂಡು—ಕಂಡು ಜನ ಈಗ ತಮ್ಮ ಭಯವನ್ನು ಬದಿಗಿಟ್ಟು ಹೋರಾಟಕ್ಕೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ಧುಮುಕುತ್ತಿದ್ದಾರೆ. ಸ್ಯಾಂಟಿಯಾಗೋ ಹಾಗೂ ಚಿಲಿಯ ಇತರ ನಗರಗಳ ಬೀದಿಗಳು ಈಗ ಭಯಾನಕ ಘರ್ಷಣೆಗಳ ಕಣಗಳಾಗಿವೆ. **"ನಾವು ಗೆಲ್ಲಬಲ್ಲೆವು-ನಾವು ಗೆಲ್ಲಲೇ ಬೇಕು"** ಎಂಬ ಘೋಷವಾಕ್ಯ ಚಿಲಿಯ ಮೂಲೆ ಮೂಲೆಗಳಿಂದ ರಿಂಗಣ ಗೊಳ್ಳುತ್ತಿದೆ. ರಾಷ್ಟ್ರೀಯ ಬಂಡಾಯವೊಂದರ ಲಕ್ಷಣ ಎಲ್ಲೆಡೆ ಕಾಣುತ್ತಿದೆ. ಚಿಲಿಯ ಜನತೆಯ ಈ ಧೀರಹೋರಾಟಕ್ಕೆ ಎಲ್ಲಾ ಸಮಾಜವಾದೀ ದೇಶಗಳ, ಅಲಿಪ್ತ ರಾಷ್ಟ್ರಗಳ ಪಶ್ಚಿಮದ ಪ್ರಜಾ ಪ್ರಭುತ್ವವಾದಿ ಜನಗಳ ಸಂಪೂರ್ಣ ಬೆಂಬಲವಿದೆ

ಚಿಲಿ ಇಂದು'

ಅವರನ್ನು ದಂಡಿಸಿ

…… ನಾನು ಆಗ್ರಹಿಸಿ ಕೇಳುತ್ತೇನೆ
ನಮ್ಮ ಈ ಸತ್ತವರ ಹೆಸರಲ್ಲಿ
ಅವರನ್ನು ದಂಡಿಸಿ
ನಮ್ಮ ನಾಡನ್ನು ರಕ್ತದಿಂದ ಹನಿಸಿದವರನ್ನು ದಂಡಿಸಿ ……
…… ಸೋದರರೇ ! ಅದು ಮುಂದುವರೆಯುತ್ತದೆ
ನಮ್ಮ ಹೋರಾಟ ನಾಡಿನಲ್ಲಿ ಮುಂದುವರೆಯುತ್ತದೆ
ಕಾರ್ಖಾನೆಗಳಲ್ಲಿ ಹೊಲಗಳಲ್ಲಿ ಬೀದಿಗಳಲ್ಲಿ
ನೈಟರ್ ಹೊಂಡಗಳಲ್ಲಿ ಹುಲ್ಲುಗಾವಲಿನಲ್ಲಿ
ಕತ್ತಲಲ್ಲಿ ಮಿನುಗುವ ಇದ್ದಲು—ಲೋಹಗಳ ಒದ್ದೆ ಗುಹೆಗಳಲ್ಲಿ
ಸಮರ ರೇಖೆಗಳನ್ನು ಎಳೆಯಲಾಗುತ್ತದೆ

ನಿಮ್ಮ ಸಾವಿನ ಸಾಕ್ಷಿಗಳಾದ ಈ ಬಾವುಟಗಳು
ಅಕ್ಷಯ ವಸಂತದ ನಂಬುಗೆಯ ದಟ್ಟ ಎಲೆಗಳ ಹಾಗೆ
ಹೆಚ್ಚುತ್ತಲೇ ಹೋಗುತ್ತವೆ
ನಮ್ಮ ಹೃದಯದಲ್ಲಿ ಹಾರಾಡುವ ತನಕ

— ಪ್ಯಾಬ್ಲೋ ನೆರೂಡ
'ಅವರನ್ನು ದಂಡಿಸಿ'

ಚಿಲಿಯಲ್ಲಿ ನಡೆದಿರುವುದು ಬಾಂಬು …ಂಕಿಗಳಿಲ್ಲದೊಂದು ನಿಶಬ್ದ ವಿಯಟ್ನಾಂ. … ಗಳಿಗೆಯಲ್ಲಿ ನಾವು ಅಘೋಷಿತ …ಮರದಲ್ಲಿ ತೊಡಗಿದ್ದೇವೆ- ಕವಿ, …ಹೋರಾಟಗಾರ ಪ್ಯಾಬ್ಲೋ ನೆರೂಡ …ಲಿ ತುಳಿತಕ್ಕೊಳಗಾಗಿ ಕುದಿಯು…ದ್ದ ಸಮಯದಲ್ಲಿ - 1973 ರಲ್ಲಿ …ಳಿದ ಮಾತು.

"ಅಮಾನುಷ ಆಕ್ರಮಣಕಾರನಿಗೆ …ವು" ಎನ್ನುತ್ತದೆ ನಮ್ಮ ರಾಷ್ಟ್ರದ …ಕೋಲುಗಳೀಗ.

ಪುಟ್ಟ ರಾಷ್ಟ್ರವನ್ನು ಪ್ರತಿಭಟನೆಯ …ಗಿ ಗಂಟೆನ್ನಾಗಿ ಮಾರ್ಪಡಿಸುತ್ತಿದೆ. …ಮೋಚನೆಗಾಗಿ ತಹತಹಿಸುತ್ತಿದ್ದ …ಚಿಲಿ ಯಲ್ಲಿ ಸದಾ ನೆತ್ತರ ಹೊಳೆ. ಕವಿ …ಯಾಗಿದ್ದ ನೆರೂಡನಿಗೆ ಕೂಡ ಇದು …ಹಾಡಲಾಗದ ಸಮಯ ವೆಂದು …ಗೊತ್ತಿತ್ತು.

…ನಾನೇಕೆ ಮಾತನಾಡುವುದಿಲ್ಲ
…ಬಯಕೆಗಳ ಬಗ್ಗೆ, ಎಲೆಗಳ ಬಗೆ
…ನನ್ನ ನಾಡಿನ ಮಹಾ ಅಗ್ನಿ ಪರ್ವ
ತದ ಬಗ್ಗೆ
– ಎಂದು ನೀವು ಕೇಳುತ್ತೀರಿ
ನೋಡಿ : ಬೀದಿಯ ಮೇಲೆ ರಕ್ತವಿದೆ
ನೋಡಿ : ರಕ್ತವಿದೆ ಬೀದಿಯ ಮೇಲೆ

1936 ರಲ್ಲಿ ಸ್ಪೇಯ್ನ್‌ನಲ್ಲಿದ್ದ ನೆರೂಡನಿಗೆ ತಾನು ಜಗತ್ತಿನ ಭೀಕರ ಘಟನೆಗಳಿಗೆ ಮೂಗು ಲಾಗುತ್ತಿದ್ದೇನೆಂಬ ಅರಿವಿರಲಿಲ್ಲ. ಸ್ಪೇಯ್ನ್ ಫಲಂಜರ್ ಯುದ್ಧ ಶುರುವಾಗಿ ಕವಿ ಲೋರ್ಕನ ಭೀಕರ ಕಗ್ಗೊಲೆ; ಗ್ಯಾಫೆಲ್, ಆರ್ಬರ್ಟ್, ಮತ್ತಿತರ ಸಾಹಿತಿಗಳ ಮನೆಗಳ ಧ್ವಂಸ, ಬುದ್ಧಿಜೀವಿಗಳ ಕಾರಾಗೃಹವಾಸ, ಸ್ಪೇಯ್ನ್ ಬೀದಿ ಬೀದಿಗಳಲ್ಲಿ ಹರಿದ ಮುಗ್ಧ ಜನರ ರಕ್ತ ನೆರೂಡನನ್ನು ವ್ಯಗ್ರಗೊಳಿಸಿದವು. ಸ್ಪೇಯ್ನ್‌ನ ಹೋರಾಟಗಾರರೊಂದಿಗೆ ಕೈಗೂಡಿಸಿ ಸರ್ವಾಧಿಕಾರಿ ಫ್ರಾಂಕೋನ ಅಮಾನುಷ ಕೃತ್ಯಗಳನ್ನು ಬಯಲಿಗೆಳೆಯುವುದರಲ್ಲಿ ಸ್ಪೇಯ್ನ್‌ನಲ್ಲಿ ನಡೆದ ಮಾರಣಹೋಮವನ್ನು ಜಗತ್ತಿಗೆ ಸಾರುವುದರಲ್ಲಿ ನಿರತನಾದ ನೆರೂಡ ಕೆಲಸ ಕಳೆದುಕೊಂಡು ಚಿಲಿಗೆ ಮರಳಬೇಕಾಯಿತು. ಅಂತರ್ ಯುದ್ಧ ಮುಗಿದ ಮೇಲೆ ಸ್ಪೇಯ್ನ್‌ನ ನಿರಾಶ್ರಿತರೊಡನೆ ನೆರೂಡ ಚಿಲಿಗೆ ವಾಪಸಾದ. ಮೆಕ್ಸಿಕೋದಲ್ಲಿ ಕೆಲಕಾಲ ಕಳೆದ ಬಳಿಕ 1945 ರಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿಕೊಂಡು ಶಾಸಕನಾಗಿ ಚುನಾಯಿತನಾದ. ಸಕ್ರಿಯ ಸದಸ್ಯನಾಗಿ ನೆರೂಡ ತೀವ್ರವಾಗಿ ತನ್ನನ್ನು ಕಮ್ಯೂನಿಸ್ಟ್ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ. ಈತನ ಚಟುವಟಿಕೆಗಳನ್ನು ಕಂಡು ಇತರ ಸಾಹಿತಿಗಳು, ನಾನು ಕಮ್ಯೂನಿಸ್ಟ್ ಅಲ್ಲ, ಆದರೆ ನಾನು ಚಿಲಿ ದೇಶದ ಕವಿಯಾಗಿದ್ದ ಪಕ್ಷದಲ್ಲಿ ನೆರೂಡನ ತರಹ ಕಮ್ಯೂನಿಸ್ಟ್ ಆಗಲು ಬಯಸುತ್ತಿದ್ದೆ". ಇಲ್ಲಿ ಚಿಲಿ ದೇಶದಲ್ಲಿ ಒಬ್ಬ ವ್ಯಕ್ತಿಗೆ ಎರಡೇ ದಾರಿ. ಕ್ಯಾಟಲಾಕ'ಗಳಲ್ಲಿ ಹಣವಂತರೊಡನೆ ಸೇರುವುದು, ಇಲ್ಲವೇ ದಟ್ಟ ದರಿದ್ರರನ್ನು ಜೊತೆಗೂಡಿಸಿ ಹೋರಾಟ ನಡೆಸುವುದು ಇಂತಹ ಕವಿ ಹೋರಾಟಗಾರ ನೆರೂಡನ ಕಮ್ಯೂನಿಸ್ಟ್ ಜೀವನದ ಪುಟ ಪುಟಗಳನ್ನೂ ತೆರೆಯುತ್ತಾ ಹೋದಂತೆ ……

ಕಾರ್ಮಿಕ ಸಂಘದ ಕೇಂದ್ರ ಕಛೇರಿಯಲ್ಲಿ ಕೆಲಸಗಾರರನ್ನು ಉದ್ದೇಶಿಸಿ ನಾನು ಭಾಷಣ ಮಾಡಕೂಡದೆಂದು ಹುಕುಂ ಒಮ್ಮೆ ನನಗೆ ಬಂತು. ನಾನು ಆ ಕಾರ್ಮಿಕರನ್ನು ಆಚೆ ಕರೆದು, ಬೋರಲು ಬೋಗುಣಿಯಂತಿರುವ ಆಕಾಶದ ಅಡಿಯಲ್ಲಿ ಅರಳಿದ್ದ ಮರುಭೂಮಿಯ ತೆರವಿನಲ್ಲಿ, ತಮ್ಮ ಹಕ್ಕು ಸ್ಥಾಪನೆಗಾಗಿ ಅವರು ಕೈಗೊಳ್ಳಬೇಕಾಗಿದ್ದ ಕಾರ್ಯವಿಧಾನವನ್ನು ವಿವರಿಸಿದೆ. ಸುಮಾರು ಇನ್ನೂರು ಜನ ಅಲ್ಲಿದ್ದರು. ಇದ್ದಕ್ಕಿದ್ದಂತೆ ಯಂತ್ರವೊಂದರ ಶಬ್ದ ಕೇಳಿಸಿ, ಆ ಕಡೆ ನೋಡಿದಾಗ ಟ್ಯಾಂಕ್ ಒಂದು ನಮ್ಮ ಕಡೆ ಬರುತ್ತಿರುವುದು ಕಾಣಿಸಿತು. ಅದು ನಮ್ಮಿಂದ ನಾಲ್ಕೈದು ಮೀಟರ್ ದೂರದಲ್ಲಿ ಬಂದು ನಿಂತಿತು. ಅದರ ಮಿಷನ್‌ಗನ್ನಿನ ನಳಿಕೆ ನೇರವಾಗಿ ನನ್ನತ್ತ ಗುರಿ ಮಾಡಲ್ಪಟ್ಟಿತ್ತು. ಆ ಟ್ಯಾಂಕಿನ ಮೇಲುಮುಚ್ಚಳ ತೆಗೆದು ನೀಟಾಗಿ ವಸ್ತ್ರ ಧರಿಸಿದ, ಆದರೆ ಅಸ್ವಸ್ಥ ಮುಖಮುದ್ರೆಯ, ಅಧಿಕಾರಿಯೊಬ್ಬ ಹೊರ ಚಿಮ್ಮಿದ. ನಾನು ಮಾತು ಮುಗಿಸುವ ತನಕ ನನ್ನನ್ನೇ ಸೂಕ್ಷ್ಮವಾಗಿ ಗಮನಿಸಿದ.

ನನ್ನ ಗಮನಕ್ಕೆ ಬಂದಿದೆ. ಯುಗೋಸ್ಲಾವಿಯ ಮತ್ತು ಚೀನಾದಲ್ಲಿ ಏನಾಗುತ್ತಿದೆ ಎನ್ನುವುದರ ಬಗ್ಗೆ, ಇಟಲಿಯ ಮಹಾ ಮುಷ್ಕರಗಳ ಫಲಿತಾಂಶದ ಬಗ್ಗೆ ಅರಿತುಕೊಳ್ಳಲು ಕುತೂಹಲಿಗಳಾಗಿದ್ದರು. ದೂರದ ಯುದ್ಧದ ಗುಡುಗು ಅವರನ್ನು ಚಿಂತಾಕುಲರನ್ನಾಗಿಸಿದ್ದರೆ, ದೂರ ದೇಶಗಳಲ್ಲಿನ ಕ್ರಾಂತಿಯ ಅರುಣೋದಯ ಅವರನ್ನು ಉತ್ಸಾಹಿತಗೊಳಿಸಿತ್ತು.

….ಆದರೆ, ಏಲ ನೀಗ್ರಾದ ಸಮುದ್ರದ ಬಳಿ ಆ ಮುಂಜಾನೆ ನನ್ನನ್ನು ಅಭ್ಯರ್ಥಿಯಾಗಿ ನೇಮಿಸಲು ನಡೆಸಿದ ನಿಶ್ಚ…

ನಾದ ಅಧ್ಯಕ್ಷ, ಮೊದಲ ತಿಂಗಳು ಗೌರವಿತನಾಗಿ ಪ್ರಶಂಸಿಸಲ್ಪಟ್ಟು -ನ್ಯಾಯವಾಗಿಯೋ, ಅನ್ಯಾಯವಾಗಿಯೋ-ಉಳಿದ ಎಪ್ಪತ್ತೊಂದು ತಿಂಗಳು ಕಟುವಾದ ಟೀಕೆ, ವಿರೋಧಗಳಿಗೆ ಗುರಿಯಾಗುತ್ತಾನೆ.

ಅಲೆಂಡೆಗೆ ಪ್ರಚಾರ ನಡೆಸಿದ್ದು

ಪಾಪ್ಯುಲರ್ ಯೂನಿಟಿ ಪಕ್ಷದ ಅಭ್ಯರ್ಥಿಯಾಗಿ ಅಲೆಂಡೆ ಚುನಾವಣೆಗೆ ನಿಲ್ಲುವುದು ಬಹುಮಟ್ಟಿಗೆ ಖಾತ್ರಿಯೆಂಬ ಪರ್ವತಕರ ಸಂಗತಿ ಒಂದು ದಿನ

'ನೋಡಿ ಬೀದಿಯ ಮೇಲೆ ರಕ್ತವಿದೆ' ಚಿಲಿಯ ಹೋರಾಟದುದ್ದಕ್ಕೂ ಬೆಳೆದು ಕವಿಯಾದ ನೆರೂಡ ಅಲ್ಲಿಯ ನೋವುಗಳಿಗೆ ಮಿಡಿದದ್ದು ಹೀಗೆ. ಅಲೆಂಡೆಯ ಹತ್ಯೆಯ ನಂತರ ನೆರೂಡ ಬರೆದ ನೆನಪಿನ ಪುಟಗಳಿಂದ ಆಯ್ದ ಭಾಗ ಇದು

ಯ, ಸುದ್ದಿಯ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿತು. ನನಗೆ ಎಲ್ಲೆಲ್ಲೂ ಸುಸ್ವಾಗತವೇ. ಹೋದ ಹೋದಲ್ಲಿ ಸ್ವಾಗತ ನೀಡಿದಾಗ ಸಹಸ್ರಾರು ಶ್ರೀಸಾಮಾನ್ಯರು, ಗಂಡಸರು, ಹೆಂಗಸರು ನನ್ನನ್ನು ತಬ್ಬಿ ಮುತ್ತಿಟ್ಟು ಅತ್ತು ತೋರಿಸಿದ ಪ್ರೀತಿ ನನ್ನ ಹೃದಯಾಂತರಾಳವನ್ನೇ ಕಲಕಿತು.

ಸ್ಯಾಂಟಿಯಾಗೊ ನಗರದ ಹೊರವಲಯದ ನಿವಾಸಿಗಳು, ಕಾಕ್ವಿಂಬೊ ಕಲ್ಲಿದ್ದಲು ಗಣಿಪ್ರದೇಶದ ಕಾರ್ಮಿಕರು, ಮರುಭೂಮಿಯ ತಾಮ್ರದ ಗಣಿಯ ದುಡಿಮೆಗಾರರು, ಮಕ್ಕಳನ್ನು ಹೊತ್ತ ಜನಗೆ ಮುಟ್ಟಿತು. ಅವನ ಈ ನಿಲುವನ್ನು ಬೆಂಬಲಿಸಲು ಸರ್ವಪಕ್ಷಗಳೂ ಸಮ್ಮತಿಸಿದ ಗಳಿಗೆಯಲ್ಲೇ ನಾನು ಕೂಡ, ಅಲೆಂಡೆಗೋಸ್ಕರ ಅಭ್ಯರ್ಥಿಯಾಗಿ ನಿಲ್ಲುವ ನನ್ನ ನಿರ್ಧಾರವನ್ನು ಬದಲಿಸಿದ್ದೇನೆಂದು ಸಾರಿದೆ. ಒಂದು ಪಾರ್ಕಿನಲ್ಲಿ ಹರ್ಷೋತ್ಸಾಹಿಗಳ ತುಂಬು ಸಭೆಯನ್ನು ಉದ್ದೇಶಿಸಿ ಮಾತಾಡಿದೆ. ಅಲ್ಲಿ, ಕಣ್ಣು ಹಾಯುವ ಪರ್ಯಂತ ಜನಸಮುದ್ರ ಮೊರೆದಿತ್ತು. ಜಾಗ ಸಾಲದೆ ಮರಗಳ ತುದಿಯಲ್ಲೂ ಜನ ಕೂತಿದ್ದರು. ಎಲೆಗಳ ನಡುವೆ ತಲೆಗಳು, ಕಾಲುಗಳು ಇಣುಕಿದ್ದವು. ಯಾವುದಕ್ಕಾದರೂ ಹೊಂದಿಕೊಳ್ಳಬಲ್ಲ

ನೋಡಿ ಬೀದಿಯ ಮೇಲೆ ರಕ್ತವಿದೆ....

ಚಿಲಿಯ ಮರುಪ್ರದೇಶದಲ್ಲಿ ನಾನು ನಡೆಸಿದ ದೀರ್ಘ ಪ್ರವಾಸ ಕಾಲದಲ್ಲಿ ಬಡವರ ಜೋಪಡಿಗಳಲ್ಲಿ ವಾಸಿಸುವುದು ಒಗ್ಗಿಕೊಂಡಿದೆ. ಅಲ್ಲಿ ನನಗೆ ಯಾವತ್ತೂ ಸುಸ್ವಾಗತದ ಆತಿಥ್ಯ. ಗಣಿಯ ಪ್ರವೇಶ ದ್ವಾರದಲ್ಲಿ ಚಿಕ್ಕ ಚಿಕ್ಕ ಧ್ವಜಗಳನ್ನು ಹಿಡಿದು ನಿಂತ ಕಾರ್ಮಿಕರನ್ನು ಎಷ್ಟೋ ಸಲ ಭೇಟಿಯಾಗಿದ್ದೇನೆ ಅವರು ನನ್ನನ್ನು ವಿಶ್ರಾಂತಿಗೆಂದು ಎಲ್ಲಿಗೋ ಕರೆದೊಯ್ಯುತ್ತಿದ್ದರು. ಅದಾದ ಮೇಲೆ ನಾನು ಅವರ ಕಷ್ಟದ ಜೀತದ ಬಗ್ಗೆ, ದಣಿಗಳ ಅನ್ಯಾಯಗಳ ಬಗ್ಗೆ, ಆ ಕಾರ್ಮಿಕರ ಕುಟುಂಬಗಳ ದಾರುಣ ಬದುಕಿನ ಬಗ್ಗೆ ಕೇಳುತ್ತಿದ್ದೆ.

ಶೂನ್ಯಾಕಾಶದ ಅಡಿಯಲ್ಲಿ ಹರಡಿದ ನಿರ್ಜನ ಪಾಳು ಭೂಮಿಯ ಪವೌನ ಗೋಪುರಗಳಲ್ಲಿ ಖೈದಿಗಳಾದ ಈ ಜನ, ರಾಜಕೀಯ ಹಾಗೂ ಪ್ರಪಂಚದ ವಿದ್ಯಮಾನಗಳ ಬಗ್ಗೆ ಆಸಕ್ತರಾಗಿರುವುದು ಕೊಂಡ ಜೀತದಾಳು ಹೆಣ್ಣುಗಳು ನನ್ನನ್ನು ನೋಡಲು ಗಂಟೆಗಟ್ಟಲೆ ಕಾದಿದ್ದರು. ಬಯೊಬಯೊ ನದಿಯಿಂದ ಮೆಗಲಾನ್ ಸ್ಟ್ರೈಟ್ಸ್ ದ್ವೀಪಗಳ ಆ ದೀರ್ಘ ವಿಸ್ತೀರ್ಣದಲ್ಲಿ ಶೋಚನೀಯ ಅಸ್ತಿತ್ವದಿಂದ ನರಳಿರುವ ದೀನ ಜನರು—ಇವರಿಗೆಲ್ಲ ನಿಲ್ಲದ ಮಳೆಯಲ್ಲಿ, ಬೀದಿಗಳಲ್ಲಿ, ದೊಡ್ಡ ರಸ್ತೆಗಳಲ್ಲಿ ತಣ್ಣಗೆ ಕೊರೆಯುವ ಚಳಿಗಾಳಿಯಲ್ಲಿ ನನ್ನ ಪದ್ಯಗಳನ್ನು ಓದಿ ರಂಜಿಸಿದೆ.

ಇದರಿಂದ ನಾನೂ ಸ್ಫೂರ್ತಿತನಾದೆ. ನಾನು ಭಾಗವಹಿಸಿದ ಪ್ರತಿ ಹೊಸ ಸಭೆಯಲ್ಲೂ ಹೆಚ್ಚು ಹೆಚ್ಚು ಜನರ, ಹೆಚ್ಚು ಹೆಚ್ಚು ಹೆಣ್ಣುಮಕ್ಕಳ ಸಹವಾಸ ಸಂಪರ್ಕ ನನಗೆ ದೊರಕಿತು ಈ ಪ್ರದೇಶಕ್ಕೆ ಇದ್ದಕಿದ್ದ ಹಾಗೆ ನಾನು ಅಧ್ಯಕ್ಷನಾಗಿ ಚುನಾಯಿತನಾದರೆ ನನ್ನ ಗತಿಯೇನು ? ಎನ್ನುವ ಭಯ ನನ್ನನ್ನು ಕಾಡಿತು. ಇಲ್ಲಿ ಚುನಾಯಿತ ಗಡಸು ಪ್ರಕೃತಿಯ ಚಿಲಿ ದೇಶದವನಿಗೆ ಸರಿಸಾಟಿ ಯಾರು !

ಪಾಳಿ ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿ ಅಲೆಂಡೆಯನ್ನೂ ನಾನು ಬಲ್ಲೆ. ಆತ ಸತತವಾಗಿ ರಾಷ್ಟ್ರಾಧ್ಯಕ್ಷ ಪದವಿಗೆ ಎದೆಗುಂದದ ಸ್ಥೈರ್ಯದಿಂದ ಸ್ಪರ್ಧಿಸಿದ್ದ. ನಾಲ್ಕನೆಯ ಸಲ ಮಾತ್ರ ಗೆದ್ದ. ಉತ್ತರ ಚಿಲಿ ಪ್ರಾಂತ್ಯದ ಕೊನೆಯ ಬೆಂದು ಗಾರಾದ ನೆಲದಲ್ಲಿ ನಾವು ಪ್ರವಾಸ ಹೋಗುತ್ತಿದ್ದ ಸಂದರ್ಭಗಳುಂಟು. ಕಾರಿನ ಮೂಲೆಯಲ್ಲಿ ಕೂತ ಅಲೆಂಡೆ ತುಂಬು ನಿದ್ರೆಯಲ್ಲಿ ಮುಳುಗಿಬಿಡುತ್ತಿದ್ದ. ಇದ್ದಕ್ಕಿದ್ದಂತೆ ಒಂದು ಕೆಂಪು ಚುಕ್ಕೆ ದೂರದಿಂದ ಕಾಣಿಸುತ್ತಿತ್ತು. ಹತ್ತಿರವಾದಾಗ ಧ್ವಜಗಳನ್ನು ಹಿಡಿದು ನಿಂತ ಹದಿನೈದು ಇಪ್ಪತ್ತು ಗಂಡಸರು, ಹೆಂಗಸರು

(7ನೇ ಪುಟ ನೋಡಿ)

ಎ. ಬಿ. ಎಲ್. ಕಾರ್ಮಿಕರ ಮುಷ್ಕರ

ಗುಲ್ಬರ್ಗಾ ಜಿಲ್ಲೆಯ ಶಹಾಬಾದ್‌ನಲ್ಲಿರುವ ಎ. ಬಿ. ಎಲ್ ಕಾರ್ಖಾನೆಯ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಒಂದು ವರುಷದಿಂದ ಹೋರಾಟ ನಡೆಸುತ್ತಿದ್ದಾರೆ. ಆದರೆ ಆಡಳಿತ ವರ್ಗದ ಧೋರಣೆಯಿಂದಾಗಿ ಬೇಡಿಕೆಗಳು ಈಡೇರದೆ ಒಂದೂವರೆ ತಿಂಗಳಿನಿಂದ ಅಲ್ಲಿನ ಕಾರ್ಮಿಕರು ನ್ಯಾಯಯುತ ಮುಷ್ಕರ ನಡೆಸುತ್ತಿದ್ದಾರೆ. ಆಡಳಿತ ವರ್ಗವು ಕಾರ್ಖಾನೆಗೆ 33 ಕೋಟಿ ರೂಪಾಯಿ ನಷ್ಟವುಂಟಾಗಿದೆ ಎಂದು ಕರ ಪತ್ರದ ಮೂಲಕ ಹೇಳಿ ಕೊಂಡಿರುವುದು ಅಪ್ಪಟ ಸುಳ್ಳಾಗಿದ್ದು ಸುಮಾರು ಎಂಟು ಕೋಟಿ ರೂಪಾಯಿ ಲಾಭ ದೊರೆತಿದೆ ಯೆಂಬುದು ಬಹಿರಂಗ ಸತ್ಯವೆಂದು ಹೇಳಿಕೆ ತಿಳಿಸಿದೆ

ಕಾರ್ಮಿಕರ ಬೇಡಿಕೆಗಳು ನ್ಯಾಯಯುತವಾಗಿದ್ದು ಅವುಗಳನ್ನು ಈಡೇರಿಸುವಂತೆ ಆಡಳಿತವರ್ಗದಮೇಲೆ ಒತ್ತಡ ತರಬೇಕೆಂದು ಅಲ್ಲಿನ ಕಾರ್ಮಿಕರು ರಾಜ್ಯದ ಮುಖ್ಯ ಮಂತ್ರಿಯವರಿಗೆ ಬರೆದಿರುವ ಪತ್ರದಲ್ಲಿ ವಿನಂತಿಸಿಕೊಂಡಿದ್ದಾರೆ.

ಕಾಫಿ ಕ್ಯೂರಿಂಗ್ ನೌಕರರ ಮುಷ್ಕರ

ಹಾಸನ ನಗೆರದಲ್ಲಿರುವ ಹಾಸನ ಕಾಫಿಕ್ಯೂರಿಂಗ್ ವರ್ಕ್ಸ್, ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್ ಮತ್ತು ಭಾರತಿ ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಕಾರ್ಮಿಕರು ಅಕ್ಟೋಬರ್ 9 ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸುತ್ತಿದ್ದಾರೆ.

ಕಾಫಿ ಕ್ಯೂರಿಂಗ್ ವರ್ಕ್ಸ್‌ಗಳಲ್ಲಿ ಮಹಿಳಾ ಕಾರ್ಮಿಕರೇ ಹೆಚ್ಚಾಗಿದ್ದು ರಾಜ್ಯ ಸರ್ಕಾರ 27-3-86 ರಂದು ಪ್ರಕಟಿಸಿರುವಂತೆ 26-5-84 ರಿಂದ ಸಂಬಳ ಮತ್ತು 1-4-85 ರಿಂದ ತುಟ್ಟಿಭತ್ತೆಯ ಬಾಕಿಯನ್ನು ಕೊಡುವಂತೆ ಒತ್ತಾಯಿಸಿ 1-8-86 ರಂದು ಒಂದು ದಿನದ ಯಶಸ್ವಿ ಮುಷ್ಕರ ನಡೆಸಿ ಉಪ ಕಾರ್ಮಿಕ ಆಯುಕ್ತರ ಕಛೇರಿ ಯೆದುರು ಮತ ಪ್ರದರ್ಶನ ನಡೆಸಲಾಗಿತ್ತು. ಉಪ ಕಾರ್ಮಿಕರ ಆಯುಕ್ತರ ಆಶ್ವಾಸನೆಯಂತೆ 15 ದಿನಗಳೊಳಗೆ ಬಾಕಿಯನ್ನು ಪಾವತಿ ಮಾಡದೇ ಇರುವುದರಿಂದ ಕಾರ್ಮಿಕರು ಮುಷ್ಕರ ಪ್ರಾರಂಭಿಸಿದ್ದಾರೆ. ಮುಷ್ಕರವು ಯಶಸ್ವಿಯಾಗಿ ನಡೆಯುತ್ತಿರುವುದರಿಂದ ಕಾಫಿ ಕ್ಯೂರಿಂಗ್‌ನ ಕೆಲಸಗಳು ಸಂಪೂರ್ಣವಾಗಿಸ್ಥಗಿತಗೊಂಡಿದೆ. ಕಾರ್ಮಿಕರ ಒಗ್ಗಟ್ಟನ್ನು ಮುರಿಯಲು ಮಾಲೀಕರು ಪ್ರಯತ್ನಗಳನ್ನು ನಡೆಸುತ್ತಿದ್ದು ಕಾರ್ಮಿಕರು ತಮ್ಮ ಬೇಡಿಕೆಗಳು ಈಡೇರುವವರೆಗೂ ತಮ್ಮ ಅಚಲವಾದ ಹೋರಾಟವನ್ನು ಮುಂದುವರಿಸಲು ತೀರ್ಮಾನಿಸಿದ್ದಾರೆ.

ರಾಯಚೂರಿನಲ್ಲಿ ಐಕ್ಯತಾ ದಿನಾಚರಣೆ

ಸೆಪ್ಟೆಂಬರ್ 19 ರಂದು ರಾಯಚೂರಿನಲ್ಲಿ ರಾಷ್ಟ್ರೀಯ ಐಕ್ಯತಾ ದಿನಾಚರಣೆಯನ್ನು ಆಚರಿಸಲಾಯಿತು ಸಿ.ಪಿ.ಐ. (ಎಂ) ನ ರಾಯಚೂರು ನಗರ ಸಮಿತಿ ಆಶ್ರಯದಲ್ಲಿ ನಡೆದ ಈ ಬಹಿರಂಗ ಸಭೆಯನ್ನುದ್ದೇಶಿಸಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕಾ. ಕಲಾಲ ಬಂಡಿ, ಪುರುಶೋತ್ತಮ, ಹಾಗೂ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ. ಚಂದ್ರಶೇಖರ ಬಾಳೆಯವರುಮಾತನಾಡಿದರು. ದೇಶವನ್ನು ವಿಛಿದ್ರ ಗೊಳಿಸಲು ಅಮೇರಿಕನ್ ಸಾಮ್ರಾಜ್ಯ ಶಾಹಿಗಳು ನಡೆಸುತ್ತಿರುವ ಸಂಚುಗಳ ಬಗ್ಗೆ, ಖಾಲಿಸ್ಥಾನ, ಯೊರ್, ಖಂಡ ಸ್ಥಾನ ಗೂರ್ಖಾ ಲ್ಯಾಂಡ್ ಚಳುವಳಿಗೆ ಅಮೇರಿಕವು ನೀಡುತ್ತಿರುವ ಕುಮ್ಮಕ್ಕುಗಳ ಬಗ್ಗೆ ದೇಶದೊಳಗಿನ ಕೋಮು ಸಂಘಟನೆ ಗಳಾದ ಆರ್. ಎಸ್. ಎಸ್. ಮತ್ತು ಜಮಾತೇ ಇಸ್ಲಾಂಗಳು ಧಾರ್ಮಿಕ ಆಧಾರದಲ್ಲಿ ನಡೆಸುತ್ತಿರುವ ಅಪಾಯಕಾರಿ ಪ್ರಚಾರಗಳ ಬಗೆ ಜನತಾ, ಬಿ. ಜೆ. ಪಿ. ಇನ್ನಿತರ ಬಲಪಂಥೀಯ ಪಕ್ಷಗಳ ಸಂದರ್ಭ ಸಾಧಕತನದ ಬಗ್ಗೆ ವಿವರಿಸಿ ದುಡಿಯುವ ವರ್ಗದಿಂದ ಮಾತ್ರವೇ ದೇಶದ ಐಕ್ಯತೆ ಸಾದ್ಯ ಎಂಬುದಾಗಿ ಹೇಳಿದರು.ಸಭೆಯ ಪ್ರಾರಂಭದಲ್ಲಿ ಕಾ. ರಾಘವೇಂದ್ರ ಕುಷ್ಟಗಿ ಅವರು ಸ್ವಾಗತಿಸಿದರು. ಕಾ. ಆರ್ ಬಸವರಾಜ್ ಅವರು ವಂದನಾರ್ಪಣೆ ಮಾಡಿದರು.

ಬಿಜಾಪುರ

ರೈತ ಸಂಘದ ಸಭೆಗಳು

ವಿಜಾಪುರ ತಾಲ್ಲೂಕಿನ ಹೊಕ್ಕುಂಡಿ ಹಾಗೂ ಸಂಗಾಪುರ ಎಸ್. ಎಚ್. ಗ್ರಾಮಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಸಭೆಗಳು ನಡೆದು ಅಲ್ಲಿ ಗ್ರಾಮ ಘಟಕಗಳನ್ನು ರಚಿಸಲಾಗಿದೆ. ವಿಜಾಪುರ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾ. ಭೀಮಶಿ ಕಲಾದಗಿಯವರು ಎರಡೂ ಸಭೆಗಳಲ್ಲಿ ಭಾಗವಹಿಸಿ ರೈತ ಸಂಘದ ಉದ್ಘಾಟನೆಯನ್ನು ನಡೆಸಿಕೊಟ್ಟರು. ಹೊಕ್ಕುಂಡಿ ಗ್ರಾಮದ ಸಮಾರಂಭವು ಕಾ. ತಮ್ಮಣ್ಣ ರಾವ್ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಕೆಳಕಂಡ ಪದಾದಿಕಾರಿಗಳನ್ನು ಆರಿಸಲಾಗಿದೆ.

ಕಾ. ಮಲ್ಲಪ್ಪ ಯು. ಕಳವಾರ-ಅದ್ಯಕ್ಷ, ಕಾ ಬಾಪ್ಪುರಾಯ ಶರಣಪ್ಪ ಸಾರವಾಡ, ಕಾ. ಸಿದ್ದರಾಯ ವಾಲಿಕಾರ -ಉಪಾಧ್ಯಕ್ಷರು, ಕಾ. ನಿಂಗಯ್ಯ ಈ ಹಿರೇಮಠ -ಕಾರ್ಯದರ್ಶಿ ಕಾ. ಸಿದ್ದಪ್ಪ ಬಾಗಿ -ಸಹ ಕಾರ್ಯದರ್ಶಿ ಕಾ. ಪುಂಡಲಿಕ ನಾವಿ - ಖಜಾಂಜಿ.

ಸಭೆಯಲ್ಲಿ ಗ್ರಾಮದ ಸಮಸ್ಯೆಗಳ ಬಗ್ಗೆ ಚರ್ಚಿಸಿ 9 ಬೇಡಿಕೆಗಳ ಪಟ್ಟಿಯನ್ನು ತಯಾರಿಸಿ ಠರಾವು ಕೈಗೊಳ್ಳಲಾಯಿತು.

ಸಂಗಾಪುರ ಗ್ರಾಮದ ರೈತ ಸಂಘದ ಸಭೆಯು ಕಾ. ಈರನ ಗೌಡ ಬರಗಿಯವರ ಅಧ್ಯಕ್ಷತೆಯಲ್ಲಿ ನಡೆದು ಕೆಳಕಂಡ ಪದಾಧಿಕಾರಿಗಳನ್ನು ಚುನಾಯಿಸಿದೆ. ಕಾ. ಮಲ್ಲಪ್ಪ ತೇಜಪ್ಪ ಮಾದರ-ಅಧ್ಯಕ್ಷರು ಕಾ. ಈರಪ್ಪ ಗಲಗಲಿ -ಉಪಾಧ್ಯಕ್ಷ ಕಾ. ಗಂಗಾಧರ ಪತ್ತಾರ -ಕಾರ್ಯದರ್ಶಿ ಕಾ. ಮಹದೇವಪ್ಪ ಮಾದರ -ಸಹ ಕಾರ್ಯದರ್ಶಿ ಕಾ. ಈರನ ಗೌಡ ಸಿ. ಬರಗಿ -ಖಜಾಂಜಿ

ಸಭೆಯು ತಮ್ಮ ಗ್ರಾಮದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಎಂಟು ಮುಖ್ಯ ಬೇಡಿಕೆಗಳ ಬಗ್ಗೆ ನಿರ್ಣಯವನ್ನು ಕೈಗೊಂಡಿತು.

ಮೇಲ್ಕಂಡ ಸಭೆಗಳಲ್ಲಿ ವಿಜಾಪುರ ರೈತ ಸಂಘದ ಖಜಾಂಜಿ ಕಾ. ಆರ್. ಎಚ್ ಕಲಾದಗಿ, ಉಪಾಧ್ಯಕ್ಷರಾದ ಕಾ. ವಿ. ಎಚ್. ಹೊನ್ನುಟಗಿ, ಸಹ ಕಾರ್ಯದರ್ಶಿ ಕಾ. ಅಣ್ಣಾರಾಯ ಈಳಗೇರ. ಕಾ. ಭೀಮಾ ಶಂಕರ ನಿಮುಗೆರೆ, ಕಾ. ಚಂದ್ರಕಾಂತ ಬಿಜ್ಜರಗಿ ಮುಂತಾದವರು ಮಾತನಾಡಿದರು.

ಡಿ. ವೈ. ಎಫ್. ಐ. ರಾಜ್ಯ ಸಮಿತಿ ಸಭೆ

ಡಿ ವೈ. ಎಫ್. ಐ ನ ಕರ್ನಾಟಕ ರಾಜ್ಯ ಸಮಿತಿ ಸಭೆಯು ಅಕ್ಟೋಬರ್ 2 ಮತ್ತು 3 ರಂದು ಕಾ. ಎಂ. ಎ ಬೇಬಿ ಅವರ ಮಾರ್ಗದರ್ಶನದಲ್ಲಿ ಸವದತ್ತಿಯಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾ. ಮಹಾಬಲ ವಡೇರ ಹೋಬ್ಳಿ ಅವರು ವಹಿಸಿದ್ದರು. ಅಕ್ಟೋಬರ್ 25ರೊಳಗಾಗಿ ಸದಸ್ಯತ್ವ ನೊಂದಾವಣಿ ಕಾರ್ಯವನ್ನು ಯಶಸ್ವಿಯಾಗಿ ಮುಗಿಸಿ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ರಾಜ್ಯ ಸಮಿತಿಗೆ ವಿವರಗಳನ್ನು ಕಳುಹಿಸಿಕೊಡಬೇಕೆಂದು ಸಭೆಯು ನಿರ್ಣಯಿಸಿದೆ. ನವೆಂಬರ್ 1 ರಿಂದ 3ರವರೆಗೆ ರಾಜ್ಯದ ಎಲ್ಲಾ ಘಟಕಗಳೂ, ಕ್ರೀಡಾ ಸ್ಪರ್ಧೆ, ವಿಚಾರ ಸಂಕಿರಣ ಧ್ವಜಾರೋಹಣ, ಮೆರವಣಿಗೆ, ಬಹಿರಂಗ ಸಭೆಗಳ ಮೂಲಕ ವ್ಯಾಪಕ ಪ್ರಚಾರ ನೀಡಿ ಡಿ. ವೈ. ಎಫ್.ಐ ನ ಆರನೇ ವಾರ್ಷಿಕೋತ್ಸವವನ್ನು ಆಚರಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅಕ್ಟೋಬರ್ 3 ರಂದು ಸವದತ್ತಿಯ ಕೆ. ಪಿ. ಎಂ. ಸಿ ಸಭಾಂಗಣದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ. ಎಂ. ಎ. ಬೇಬಿ ಅವರು ಮಾತನಾಡಿದರು. ವಿಶ್ವಶಾಂತಿಗಾಗಿ ನಡೆಯುವ ಹೋರಾಟಗಳ ಮಹತ್ವ, ಗೂರ್ಖಾ ಲ್ಯಾಂಡ್ ಚಳವಳಿಯ ಕುರಿತು ಕೇಂದ್ರ ಸರ್ಕಾರದ ಅಪಾಯಕಾರೀ ನಿಲುವು, ಮೀಸಲಾತಿ ಸಮಸ್ಯೆ ಮುಂತಾದ ವಿಯಷಗಳ ಬಗ್ಗೆ ವಿವರಿಸಿದರು. ರೈತ ಸಂಘದ ಮುಖಂಡರಾದ ಕಾ. ಕಪ್ಪಣ್ಣನವರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಸಮಿತಿ ಅಧ್ಯಕ್ಷರಾದ ಕಾ. ಮಂಡಾಸ್ ಸ್ವಾಗತಿಸಿದರು. ಕಾ. ಕೃಷ್ಣಕಟ್ಟಿಯವರು ವಂದಿಸಿದರು.

ಚಾಮರಾಜನಗರ :

ಮನೆ ಹಂಚುವಲ್ಲಿ ಮೋಸ

ಮೈಸೂರು ಜಿಲ್ಲೆಯ ಚಾಮರಾಜನಗರ ತಾಲೂಕಿನಲ್ಲಿ ಸುಮಾರು 5 ಸಾವಿರ ಬೀಡಿ ಕಾರ್ಮಿಕರಿದ್ದು ಬಹುತೇಕ ಜನ ಅಸಂಘಟಿತರಾಗಿದ್ದಾರೆ. ಕಳೆದ ಮೂರು ವರ್ಷಗಳಿಂದ ಇವರುಗಳನ್ನು ಸಂಘಟಿಸಲು ಸಿ.ಐ. ಟಿ. ಯು ಶ್ರಮಿಸುತ್ತಿದ್ದು, ಸಿ. ಐ. ಟಿ. ಯು. ನೇತೃತ್ವದಲ್ಲಿ ಹೋರಾಡಿ ಇಲ್ಲಿನ ಕಾರ್ಮಿಕರು ಹಲವಾರು ಸೌಲಭ್ಯಗಳನ್ನು ಪಡೆದಿರುತ್ತಾರೆ.

ಬೀಡಿ ಕೆಲಸಗಾರರ ಕಲ್ಯಾಣ ನಿಧಿ ಹಾಗೂ ಸರಕಾರದ ಬೀಡಿ ಕಾರ್ಮಿಕರಿಗಾಗಿ 425 ಮನೆಗಳನ್ನು ಕಟ್ಟಲಾಗಿದ್ದು ಇದರ ವಿತರಣೆಯ ಸಂಬಂಧದಲ್ಲಿ ಅಕ್ರಮ— ಅವ್ಯವಹಾರಗಳು ನಡೆಯುತಿದ್ದು ಇದರಲ್ಲಿ ಅಜೀಜ್ ಶೇಠ್ ನೇತೃತ್ವದ ಪೋಟಿ ಕಾರ್ಮಿಕ ಸಂಘದ ಕೈವಾಡದ ಬಗ್ಗೆ ಜನ ಮಾತನಾಡುತ್ತಿದ್ದಾರೆ. ಸಿ.ಐ.ಟಿ.ಯು ನೇತೃತ್ವದ ಬೀಡಿ ಕಾರ್ಮಿಕರ ಸಂಘಟನೆ ವತಿಯಿಂದ ಸಲ್ಲಿಸಲಾದ ನಿವೇಶನ ರಹಿತರ ಹೆಸರಿನ ಪಟ್ಟಿಯ ಯಾವ ಹೆಸರೂ ಮನೆ ವಿತರಣೆಗೆ ಆಯ್ಕೆಯಾಗದಿರುವುದು ಇಲ್ಲಿ ಗಮನೀಯ ವಿಚಾರ.

2-10-1986 ರಂದು ನಡೆದ ಬೀಡಿ ಕಾರ್ಮಿಕರ ಸಭೆಯಲ್ಲಿ ಮನೆ ಹಂಚಿಕೆ ಸಂಬಂಧ ನಡೆದ ಅಕ್ರಮ ವ್ಯವಹಾರವನ್ನು ತೀವ್ರವಾಗಿ ಖಂಡಿಸಲಾಯಿತು ಹಾಗೂ ಮನೆ ಹಂಚಿಕೆ ಬಗ್ಗೆ ಎಲ್ಲಾ ಬೀಡಿ ಕಾರ್ಮಿಕರಿಗೂ ಸರಿಯಾದ ತಿಳುವಳಿಕೆ ನೀಡಿ - ವ್ಯವಸ್ಥಿತವಾಗಿ, ಅರ್ಹರಿಗೆ ಮನೆ ವಿತರಿಸುವಕ್ರಮಕ್ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸಲಾಯಿತು. ಬೇಡಿಕೆ ಈಡೇರದಿದ್ದಲ್ಲಿ ಹೋರಾಟ ತೀವ್ರಗೊಳ್ಳುವುದಾಗಿ ಎಚ್ಚರಿಸಲಾಗಿದೆ.

ಸಂತಾಪ ಸೂಚನೆ

ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕೋಶಾಧಿಕಾರಿಯವರಾದ ಬಿ. ಗೋಪಾಲ ಮತ್ತು ಅದೇ ಸಂಘದ ಜತೆ ಕಾರ್ಯದರ್ಶಿಯವರಾದ ಬಿ. ಕೃಷ್ಣಪ್ಪ ಅವರ ತಂದೆಯವರಾದ ವಾಸು ಪೂಜಾರಿಯವರು (ಪ್ರಾಯ 65 ವರ್ಷ) ದಿನಾಂಕ 3-10-86 ಶುಕ್ರವಾರದಂದು ದೀರ್ಘ ಕಾಲದ ಅನಾರೋಗ್ಯದಿಂದ ತೀರಿಕೊಂಡರು. ಮರಣ ವಾರ್ತೆ ತಿಳಿದ ದಾಕ್ಷಣ ಸಂಘದ ಕಾರ್ಯದರ್ಶಿ ಕೆ. ಗಂಗಯ್ಯ ಅಮೀನ್ ದ. ಕ. ಜಿಲ್ಲಾ ಬೀಡಿ ಫೆಡರೇಷನ್ (ಸಿ.ಐ. ಟಿ. ಯು) ನ ಕಾರ್ಯದರ್ಶಿ ಯವರಾದ ಯು. ಬಿ. ಲೋಕಯ್ಯ ಮತ್ತು ಮಂಗಳೂರು ತಾಲೂಕು ರೈತ ಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ ಇವರುಗಳು ಮೃತರ ಮನೆಗೆ ತೆರಳಿ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು. ಮೃತರ ಮಕ್ಕಳ ಹಾಗೂ ಬಂಧು ಬಳಗದವರ ದುಃಖದಲ್ಲಿ ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘ ಪಾಲ್ಗೊಳ್ಳುತ್ತದೆ ಎಂಬುದಾಗಿ ತಿಳಿಸಿದೆ.

ನೋಡಿ ಬೀದಿಯ ಮೇಲೆ ರಕ್ತವಿದೆ......

(5ನೇ ಪುಟದಿಂದ)

ಮಕ್ಕಳು ಕಣ್ಣ ಮುಂದೆ ಅರಳಿ ನಿಲ್ಲುತ್ತಿದ್ದರು. ಕಾರು ನಿಲ್ಲುತ್ತಿತ್ತು. ಅಲೆಂಡೆ ಎಚ್ಚೆತ್ತು ಕಣ್ಣುಜ್ಜಿಕೊಳ್ಳುತ್ತ ಆ ಸಣ್ಣ ಗುಂಪನ್ನು ಭೇಟಿ ಮಾಡಲು ಹೋಗುತ್ತಿದ್ದ. ಅವರ ಜೊತೆ ತಾನೂ ಕೋರಸಿ ರಾಷ್ಟ್ರಗೀತೆ ಹಾಡುತ್ತಿದ್ದ. ಬಳಿಕ ತುಂಬ ಭಾವಪೂರ್ಣವಾಗಿ, ಉಜ್ವಲವಾಗಿ, ಸ್ಫೂರ್ತಿಯುತವಾಗಿ ಮಾತಾಡುತ್ತಿದ್ದ. ಆ ಮೇಲೆ ಕಾರಿಗೆ ಮರಳಿ ಬಂದು ಒರಗುತ್ತಿದ್ದ.

ಕಾರಿನಿಂದಿಳಿದು ರೈಲು ಹತ್ತುವಾಗ, ರೈಲಿನಿಂದ ವಿಮಾನಕ್ಕೇರುವಾಗ, ವಿಮಾನದಿಂದ ಹಡಗಿಗೆ ನಡೆದಾಗ, ಹಡಗಿನಿಂದ ಕುದುರೆಯನ್ನೇರಿದಾಗ, ಚೂರೂ ಆಯಾಸಗೊಳ್ಳದೆ, ಆ ಪ್ರಯಾಸಕರ, ವಿಶ್ರಾಂತಿರಹಿತ ತಿಂಗಳುಗಳಲ್ಲಿ ಆತ ಸಹಸ್ರಾರು ಚಿಲಿಯನ್ನರನ್ನು ಉದ್ದೇಶಿಸಿ ಮಾತಾಡುತ್ತಿದ್ದ. ಬಳಲಿ ಬೆಂಡಾದ ಸುಮಾರು ಎಲ್ಲ ಜೊತೆಗಾರರೂ ಅವನ ಈ ಉತ್ಸಾಹದೆದುರು ಕಂಗಾಲಾಗಿ ಹಿಂದೆ ಬೀಳುತ್ತಿದ್ದರು. ಕಾಲಕ್ರಮೇಣ, ಅಲೆಂಡೆ ಚಿಲಿಯ ರಾಷ್ಟ್ರಾಧ್ಯಕ್ಷನಾಗಿ ಚುನಾಯಿತನಾದ ಮೇಲೂ ಹಿಂದಿನಂತೆಯೇ ಆಯಾಸವರಿಯದವನಾಗಿದ್ದ, ಕ್ರಿಯಾಶಾಲಿಯಾಗಿದ್ದ.

ನನ್ನ ಜನತೆಯಷ್ಟು ಘೋರ ವಂಚನೆಗೆ ಒಳಗಾಗಿರುವವರು ಮನುಷ್ಯೇತಿಹಾಸದ ನೆನಪಿನಲ್ಲೇ ಇನ್ನೊಬ್ಬರಿಲ್ಲ. ಪೆಟ್ಲುಪ್ಪಿನ ಮರುಭೂಮಿಗಳಿಂದ, ಸಾಗರ ತಳದ ಕಲ್ಲಿದ್ದಲು ಗಣಿಗಳಿಂದ ಮತ್ತು ನನ್ನ ಜನ ಅತಿಮಾನುಷ ಪ್ರಯತ್ನದಿಂದ ತಮ್ಮ ಕೈಗಳಿಂದ ತೆಗೆಯುವ ತಾಮ್ರದದುರು ಹುದುಗಿರುವ ಆ ಭಯಾನಕ ಶಿಲಾ ಖಂಡಗಳಿಂದ–ಸಾಲ್ವಡಾರ್ ಅಲೆಂಡೆ ಹೆಸರಿನ ವ್ಯಕ್ತಿಯನ್ನು ಚಿಲಿಯ ರಾಷ್ಟ್ರಾಧ್ಯಕ್ಷ ಪದವಿಗೆ ಆಯ್ಕೆಮಾಡಿದ ಮಹಾ ಸ್ವಾತಂತ್ರ್ಯ ಸಂಘಟನೆಯೊಂದು ಹೊಮ್ಮಿತು. ನ್ಯಾಯಸಮ್ಮತ ಸುಧಾರಣೆಗಳನ್ನು ಜಾರಿಗೆ ತರುವ ಹಾಗು ವಿದೇಶೀ ದರೋಡೆಕಾರರ ಕಪಿಮುಷ್ಟಿಯಿಂದ ತಮ್ಮ ರಾಷ್ಟ್ರೀಯ ಸಂಪತ್ತನ್ನು ಮರಳಿಸಿಕೊಡುವ ತ್ವರಿತ ಕಾರ್ಯಾಚರಣೆಯೇ ಆತನ ಆಯ್ಕೆಯ ಉದ್ದೇಶ.

ನಾನು ಎಲ್ಲೇ ಇರಲಿ, ಅತಿ ದೂರದ ಸ್ಥಳಗಳಲ್ಲೂ ಕೂಡ, ಜನ ರಾಷ್ಟ್ರಾಧ್ಯಕ್ಷ ಅಲೆಂಡೆಯ ಬಗ್ಗೆ ಪ್ರೀತಿಯನ್ನೂ ಪ್ರಜಾಹಿತಾಸಕ್ತಿಯ ನಮ್ಮ ಸರಕಾರದ ಬಗ್ಗೆ ಅಮೋಘ ಪ್ರಶಂಸೆಯನ್ನೂ ವ್ಯಕ್ತಪಡಿಸಿದ್ದಾರೆ. ಚಿಲಿಯ ರಾಷ್ಟ್ರಾಧ್ಯಕ್ಷನ ಬಗ್ಗೆ ಜಗತ್ತಿನ ವಿವಿಧ ದೇಶಗಳ ಪ್ರತಿನಿಧಿಗಳು ವ್ಯಕ್ತಪಡಿಸಿದ ಸ್ವಾನಂದ ಘೋಷಕ್ಕೆ ನ್ಯೂಯಾರ್ಕಿನ ವಿಶ್ವಸಂಸ್ಥೆಯ ಕಟ್ಟಡ ಮಾರ್ದನಿಸಿದ ಹಾಗೆ ಅದರ ಇತಿಹಾಸದಲ್ಲೇ ಮಾರ್ದನಿಸಿರಲಿಲ್ಲ.

ಚಿಲಿಯ ನಾವು ನಮ್ಮ ರಾಷ್ಟ್ರದ ಮಹಾನ್ ವ್ಯಕ್ತಿಗಳ ಶೌರ್ಯ ಸಾಹಸದ ಕೃತಜ್ಞತಾಪೂರ್ವಕ ಅಂಗೀಕಾರದ ಮೇಲೆ ರಾಷ್ಟ್ರೀಯ ಪ್ರತಿಷ್ಠೆ, ಸಾರ್ವಭೌಮಿಕೆಯ ಬಗೆಗಿನ ಗೌರವದ ಮೇಲೆ ಆಧಾರಿತವಾದ ನವಸಮಾಜವೊಂದನ್ನು ನಿರ್ಮಿಸುವ ಹೋರಾಟದಲ್ಲಿ ದುಸ್ಸಹ ವಿಘ್ನಗಳನ್ನು ದಾಟುವ ಸನ್ನಾಹದಲ್ಲಿದ್ದೆವು.

ನಮ್ಮ ಕಡೆ, ಅಂದರೆ ಚಿಲಿಯ ಕ್ರಾಂತಿಯ ಕಡೆ ಸಂವಿಧಾನ, ಕಾನೂನು, ಪ್ರಜಾತಂತ್ರ, ಭರವಸೆಗಳಿದ್ದವು. ಅವರ ಕಡೆ ಇದ್ದದ್ದೆಂದರೆ ನಮೂನಮೂನೆಯ ಸೂತ್ರದ ಬೊಂಬೆಗಳ, ಥರಾವರಿ ನಕಲಿ ವಿದೂಷಕರ ದಂಡು; ಬೆಲ್ಟಿನಲ್ಲಿ ಪಿಸ್ತೂಲನ್ನು ಸಿಕ್ಕಿಸಿದ ಕೈಬೆರಳುಗಳಿಗೆ ಲೋಹದ ಕಾಪನ್ನು ತೊಟ್ಟ ವಿಧ್ವಂಸಕಾರಿಗಳು, ಡಂಭಾಚಾರದ ಮಠದಯ್ಯಗಳು, ಭ್ರಷ್ಟ ಅಧಿಕಾರಿಗಳು. ಆಶಾಭಂಗದ ಪಾನೋನ್ಮತ್ತ ರಿಂಗಣದಲ್ಲಿ ಅವರೆಲ್ಲ ಹೆಜ್ಜೆ ಹಾಕಿದ್ದರು. ಫ್ಯಾಸಿಸ್ಟ್ ಜಾರ್ಪ ಮತ್ತು ಚಿಲಿಯ ಅಧಿಕಾರವನ್ನು ಮರಳಿ ದಕ್ಕಿಸಿಕೊಳ್ಳುವುದಕ್ಕೆ ತಲೆಯೊಡೆಯಲು, ಮೂಳೆ ಮುರಿಯಲು ಸಿದ್ಧರಿದ್ದ ಅವನ ಪಕ್ಷದ ಬರ್ಬರರೊಡನೆ ಕೆನ್ನೆಗೆ ಕೆನ್ನೆ ಹಚ್ಚಿ ನೃತ್ಯವಾಡಿದ್ದರು. ಆ ಇಡೀ ಗ್ಯಾಂಗಿಗೆ ಕಳಶಕಟ್ಟುವಂತೆ ಗೊನ್ಸಾಲೆಜ್ ವಿಡೇಲ ಹೆಸರಿನ ಕೊಲೆಗಡುಕ, ಭಾರೀ ಬ್ಯಾಂಕ್ ಮಾಲೀಕ ಅವರ ಜೊತೆಗಿದ್ದ. ಹೌದು, ಗೊನ್ಸಾಲೆಜ್ ವಿಡೇಲ–ಇಂಥವೇ ಇನ್ನೊಂದು ನೃತ್ಯೋತ್ಸವದಲ್ಲಿ ಸ್ವಂತ ಪಕ್ಷವನ್ನು ಜನತೆಯ ಶತ್ರುಗಳಿಗೆ ಹಸ್ತಾಂತರಿಸಿ ದಗಾ ಹಾಕಿದ್ದು ಈ ರಾಜಕೀಯ ನಾಟ್ಯಾಚಾರ್ಯನೇ. ಈ ಸಲ ಫ್ರೈಸಹ, ದುಷ್ಕೃತ್ಯಗಳಲ್ಲಿ ಷಾಮೀಲಾದ ಜನರಲ್ ವಿಯಾಕ್ಸನೊಂದಿಗೆ ಕೈಕೈ ಮಿಲಾಯಿಸಿ, ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷವನ್ನು ಅದೇ ಜನತಾ ಶತ್ರುಗಳಿಗೆ ಸಮರ್ಪಿಸುತ್ತ ಅವರ ತಾಳಕ್ಕೆ ಕಾಲು ಕುಣಿಸಿದ್ದ. ನಾಟಕದ ಪ್ರಧಾನ ಪಾತ್ರಧಾರಿಗಳು ಇವರೇನೇ. ಆಹಾರ ಪದಾರ್ಥಗಳನ್ನು, ರಸ್ತೆಗಳಲ್ಲಿ ಲಾರಿಗಳ ಟೈರ್ ಪಂಕ್ಚರ್ ಮಾಡಲು ಹೆಮ್ಮೊಳೆಗಳನ್ನು ಹೊಡೆಯಲು ಕೈ ಬೆರಳುಗಳಿಗೆ ಲೋಹದ ಕಾಪುಗಳನ್ನು, ಬಂದೂಕಿನ ಗುಂಡುಗಳನ್ನು ಕೊಂಡು ತಂದು ಅಕ್ರಮವಾಗಿ ದಾಸ್ತಾನಿಸಿಕೊಂಡ ಜನ ಇವರೇನೇ.

ಅಲೆಂಡೆ, ರಾಜಕಾರಣಿ ಹಾಗೂ ಆಡಳಿತಗಾರನಾಗಿ ತಾನು ತೆಗೆದುಕೊಳ್ಳುವ ಪ್ರತಿಕ್ರಮವನ್ನೂ ಸಹೋದ್ಯೋಗಿಗಳೊಡನೆ ಪೂರ್ವಾಲೋಚಿಸುತ್ತಿದ್ದ. ಅವನ ಸ್ವಭಾವ, ನಿಷ್ಠೆಗಳು ನಿರಂಕುಶಾಧಿಕಾರಕ್ಕೆ ವಿರುದ್ಧವಾಗಿದ್ದವು. ನಖಶಿಖಾಂತ ಅವನೊಬ್ಬ ಪ್ರಜಾಪ್ರಭುತ್ವವಾದಿ. ಅವನು ಅಧಿಕಾರ ವಹಿಸಿಕೊಂಡಾಗ ದೇಶದ ನೆಲ, ಬಲ್ಮಸೇಡನ ಕಾಲದಲ್ಲಿದ್ದಂತೆ ಕಾಡುಮೇಡುಗಳ ಪಡುಭೂಮಿಯಾಗಿ ಉಳಿದಿರಲಿಲ್ಲ. ತನ್ನ ಶಕ್ತಿ ಸಾಮರ್ಥ್ಯಗಳ ಪರಿವೆಯಿದ್ದ ಸಶಕ್ತ ಕೃಷಿಕ ವರ್ಗ ಅದಕ್ಕಿತ್ತು. ಅಲೆಂಡೆ ಸಾಮೂಹಿಕ ಮುಖಂಡತ್ವವನ್ನು ಜಾರಿಗೆ ತಂದ. ಹುಟ್ಟಿನಿಂದ ಜನತಾವರ್ಗಕ್ಕೆ ಸೇರಿದ ವ್ಯಕ್ತಿಯಲ್ಲದಿದ್ದರೂ, ಜಡತ್ವ ಭ್ರಷ್ಟಾಚಾರಗಳನ್ನು ನೆಲೆಗೊಳಿಸಿದ್ದ ಶೋಷಕರ ವಿರುದ್ಧ ಕಾರ್ಮಿಕವರ್ಗ ನಡೆಸಿದ ಹೋರಾಟದ ಪರಿಣಾಮವಾಗಿ ಮೂಡಿದ್ದ ಫಲ ಅವನು. ಆದ್ದರಿಂದಲೇ ಅಲೆಂಡೆ ಬಲ್ಮಸೇಡನಿಗಿಂತ, ಅಷ್ಟೇಕೆ, ಚಿಲಿಯ ಚರಿತ್ರೆಯಲ್ಲೇ ಯಾರೇ ರಾಷ್ಟ್ರಪತಿಗಿಂತ ಅತ್ಯಧಿಕವಾದದ್ದನ್ನು ಅಷ್ಟು ಅಲ್ಪಾವಧಿಯಲ್ಲಿ ಸಾಧಿಸಲು ಸಮರ್ಥನಾದದ್ದು. ಕೆಲವೇ ವ್ಯಕ್ತಿಗಳ ಕೈಯಲ್ಲಿದ್ದ ಭಾರಿ ಉದ್ಯಮಗಳ ವಿಕೇಂದ್ರೀಕರಣ, ಗುರುತರವಾದ ಭೂಸುಧಾರಣೆ ಇತ್ಯಾದಿ ಅನೇಕ ಸಾಮೂಹಿಕ ಮುಖಂಡತ್ವದ ಕ್ರಮಗಳ ಮಾತಂತಿರಲಿ, ತಾಮ್ರದದುರಿನ ರಾಷ್ಟ್ರೀಕರಣವೊಂದನ್ನೇ ಪರಿಗಣಿಸಿದರೂ ಅದೊಂದು ಅವನ ದೈತ್ಯಸಾಧನೆ ಎನ್ನಿಸುತ್ತದೆ.

ಇಡೀ ದೇಶಕ್ಕೆ ಸರ್ವದಾ ಕಲ್ಯಾಣಕಾರಿಯಾದ ಅಲೆಂಡೆಯ ಕಾರ್ಯಕ್ರಮಗಳು, ನಮ್ಮ ಸ್ವಾವಲಂಬನೆಯ ಗುರಿಯನ್ನು ಸಹಿಸದ ಶತ್ರುಗಳ ಸಿಟ್ಟು ಆಕ್ರೋಶಗಳಿಗೆ ಕಾರಣವಾದವು. ಇದರ ಘೋರ ಸಂಕೇತವೇ ರಾಷ್ಟ್ರಾಧ್ಯಕ್ಷ ಭವನದ ಮೇಲೆ ನಡೆಸಿದ ಬಾಂಬು ದಾಳಿ. ಅರಕ್ಷಿತ ಊರು ಪಟ್ಟಣಗಳ ಮೇಲೆ ನಾಜಿಗಳ ಹಠಾತ್ ಬಾಂಬು ದಾಳಿಯನ್ನು ಇದು ನೆನಪಿಗೆ ತರುತ್ತದೆ. ಚಿಲಿಯಲ್ಲಿ ಈ ಸಲ ತಪ್ಪನಾಣದ ಕೃತ್ಯವೇ ಜರುಗಿಹೋಯಿತು. ಎರಡು ಶತಮಾನಗಳಿಂದ ರಾಷ್ಟ್ರದ ನಾಗರೀಕ ಜೀವನದ ಹೃತ್‌ಕೇಂದ್ರವಾಗಿದ್ದ ರಾಷ್ಟ್ರಪತಿ ಭವನ ಚಿಲಿಯ ವೈಮಾನಿಕ ಬಾಂಬುಗಳಿಗೆ ಆಹುತಿಯಾಯಿತು.

ನನ್ನ ಜೀವನಸ್ಮೃತಿಗಳ ಗ್ರಂಥ ರಚನೆಗೆ ಈ ಟಿಪ್ಪಣಿಗಳನ್ನು ನಾನು ಮಾಡಿಕೊಂಡದ್ದು, ನನ್ನ ಪ್ರಾಣ ಸ್ನೇಹಿತ ಹಾಗೂ ರಾಷ್ಟ್ರಾಧ್ಯಕ್ಷ ಕಾಮ್ರೇಡ್ ಅಲೆಂಡೆಯ ಸಾವಿಗೆ ಕಾರಣವಾದ ದುರದೃಷ್ಟಕರ ಘಟನಾವಳಿಗಳು ಜರುಗಿದ ಮೂರು ದಿನಗಳ ತರುವಾಯ. ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಅವನ ವಿಧವೆಗೆ ಮಾತ್ರ ಅವಕಾಶ ನೀಡಿ ಅವರು ಅವನ ಶವಸಂಸ್ಕಾರವನ್ನು ಗುಟ್ಟಾಗಿ ನಡೆಸಿದರು. ಅವನು ತಮ್ಮ ಕಣ್ಣಿಗೆ ಬಿದ್ದಾಗ ಸತ್ತಿದ್ದನೆಂದೂ, ಅಲ್ಲಿದ್ದ ಸಾಕ್ಷ್ಯಗಳೆಲ್ಲ ಆತ್ಮಹತ್ಯೆಯನ್ನು ಸೂಚಿಸಿದ್ದವೆಂದೂ ಆಕ್ರಮಣಕಾರರು ಸಾರಿದ್ದಾರೆ. ಆದರೆ ವಿದೇಶಿ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯೇ ಬೇರೆ. ಬಾಂಬುದಾಳಿಯ ಬಳಿಕ ಟ್ಯಾಂಕುಗಳು ಕಾರ್ಯಶೀಲವಾದವು. ಹೊಗೆ ಜ್ವಾಲೆಗಳ ನಡುವೆ ತನ್ನ ಕಛೇರಿಯಲ್ಲಿ, ದಿಟ್ಟ ಎದೆಗಾರಿಕೆಯಲ್ಲದೆ ಬೇರೆ ನೆರವಿರದೆ ಕಾದಿದ್ದ ಒಬ್ಬಂಟಿಯನ್ನು, ಚಿಲಿ ರಿಪಬ್ಲಿಕ್ಕಿನ ರಾಷ್ಟ್ರಪತಿ ಸಾಲ್ವಡಾರ್ ಅಲೆಂಡೆಯನ್ನು, ಆ ಟ್ಯಾಂಕುಗಳ ಬೃಹತ್ ಪಡೆ "ವಿರೋಚಿತ"ವಾಗಿ ಮುತ್ತಿದ್ದವು.

ಕೊಲೆಗಡುಕರು ಅಂಥ ಸದವಕಾಶವನ್ನು ಕಳೆದುಕೊಳ್ಳುವಂತಿರಲಿಲ್ಲ. ತನ್ನ ಸ್ಥಾನವನ್ನು ಅವನೆಂದೂ ಬಿಟ್ಟುಕೊಡುವುದಿಲ್ಲವೆನ್ನುವುದು ಸ್ಪಷ್ಟವಿದ್ದದ್ದರಿಂದ, ಅವರು ಅವನನ್ನು ಕೊಲ್ಲದೇ ಗತ್ಯಂತರವಿರಲಿಲ್ಲ. ಆ ಮೇಲೆ ಇಡೀ ಜಗತ್ತಿನ ಶೋಕವನ್ನು ತುಂಬಿಕೊಂಡ ಕೇವಲ ಒಬ್ಬ ಹೆಣ್ಣು ಮಗಳೊಂದಿಗೆ ಅಂತಿಮಯಾತ್ರೆ ನಡೆಸಿ, ರಾಷ್ಟ್ರಪತಿಯನ್ನು ಅತ ರಹಸ್ಯವಾಗಿ ಗೋರಿ ಕಾಣಿಸಿದರು. ಚಿಲಿಗೆ ಮತ್ತೊಮ್ಮೆ ದ್ರೋಹವೆಸಗಿದ ಸೇನೆಯ ಗುಂಡುಗಳಿಂದ ಛಿನ್ನವಿಚ್ಛಿನ್ನವಾದ ಮಹಾನ್ ವ್ಯಕ್ತಿಯ ಪಕ್ಕದಲ್ಲಿ ಆಕೆ ನಿಧಾನವಾಗಿ ಹೆಜ್ಜೆಹಾಕುತ್ತ ಸಾಗಿದ್ದಳು.......

○

ಚಿಲಿಯ ಪ್ರತಿಕ್ರಾಂತಿ : ಅಂತರ್ರಾಷ್ಟ್ರೀಯ ಚಳುವಳಿ ಕಲಿತ ಪಾಠ

(4ನೇ ಪುಟದಿಂದ)

ಚಿಲಿಯ ಫಲವತ್ತಾದ ಭೂಮಿಯನ್ನು ಸಾಗುವಳಿ ಮಾಡದೆ ಬೇಕೆಂದೇ ಪಾಳು ಬಿಡುತ್ತಿದ್ದ 'ಲಾತಿಫಂಡಿಯಾ'ಗಳೆಂಬ ಭೂ ಮಾಲಕರನ್ನು ಅಲ್ಲೆಂಡೆ ಸರಕಾರ ಕಟುವಾಗಿ ಶಿಕ್ಷಿಸಿತು. ಚಿಲಿಯ ಸಂಪರ್ಕ ವ್ಯವಸ್ಥೆ ಮತ್ತು ಹೋಟೆಲ್ ಉದ್ಯಮದಲ್ಲಿ ಭಾರಿ ಹಣ ತೊಡಗಿಸಿರುವ ಬಹುರಾಷ್ಟ್ರೀಯ ಕಂಪೆನಿ ಐ.ಟಿ.ಟಿ.ಯ ಚಟುವಟಿಕೆಗಳನ್ನು ಅಲ್ಲೆಂಡೆ ನಿಯಂತ್ರಿಸಿದರು. ಈ ಎಲ್ಲ ಪುರೋಗಾಮಿ ಕಾರ್ಯಕ್ರಮಗಳಿಗೆ ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಸಿ.ಐ.ಎ.ನ ಪ್ರತೀಕಾರ ಸಿದ್ಧವಾಗಿಯೇ ಇತ್ತು. ಸಿ.ಐ.ಎ. ಅಪಾರ ಮೊತ್ತದ ಹಣ ಸುರಿದು ಚಿಲಿಯ ಬಲಪಂಥೀಯ ಮತ್ತು ಉಗ್ರಗಾಮಿಗಳ ನೆರವಿನೊಂದಿಗೆ ಸೈನ್ಯಕ್ಕೆ ಪ್ರೇರೇಪಣೆ ನೀಡಿ ಸೆಪ್ಟಂಬರ್ 1973ರಲ್ಲಿ ಕ್ಷಿಪ್ರಕ್ರಾಂತಿ ನಡೆಸುವಲ್ಲಿ ಯಶಸ್ವಿಯಾಯಿತು. ಅಲ್ಲೆಂಡೆಯವರ ಹತ್ಯೆಯಾದ ಮೇಲೆ ಪಿನೋಚೆಯ ನೇತೃತ್ವದ ಸೈನಿಕ 'ಜಂಟಾ' ಚಿಲಿಯಲ್ಲಿ ಉಗ್ರ ಲಷ್ಕರಿ ಶಾಸನವನ್ನು ಜ್ಯಾರಿಗೆ ತಂದು ಕಮ್ಯುನಿಸ್ಟರನ್ನೂ ಕ್ರಾಂತಿಕಾರಿಗಳನ್ನೂ ಬೇಟೆಯಾಡಿತು. ಈ ಬೂಟುಗಾಲಿನ ರಾಜ್ಯಭಾರ ಕಳೆದ 13 ವರ್ಷಗಳಿಂದ ಚಿಲಿಯಲ್ಲಿ ದಬ್ಬಾಳಿಕೆ ನಡೆಸುತ್ತಲೇ ಇದೆ.

ಚಿಲಿಯ ವಿದ್ಯಮಾನಗಳಿಂದ ಅಂತರರಾಷ್ಟ್ರೀಯ ಕ್ರಾಂತಿಕಾರಿ ಚಳುವಳಿ ಸಾಕಷ್ಟು ಪಾಠ ಕಲಿತಿದೆ. ಚಿಲಿಯಲ್ಲಿ ಚುನಾವಣೆಗಳ ಮೂಲಕ ಮಾರ್ಕ್ಸ್‌ವಾದಿ ನೇತೃತ್ವದ ಪಾಪ್ಯುಲರ್ ಯುನಿಟಿ ಅಧಿಕಾರಕ್ಕೆ ಬಂದಾಗ ಜಗತ್ತಿನ ಹಲವೆಡೆ "ಇದೊಂದು ಹೊಸ ಪ್ರಯೋಗ. ಮಾರ್ಕ್ಸ್‌ವಾದಿಗಳು ಚುನಾವಣೆಯ ಮೂಲಕ ಅಧಿಕಾರಕ್ಕೆ ಬಂದು ಶಾಂತಿಯುತವಾಗಿ ಸಮಾಜವಾದಿ ರಾಷ್ಟ್ರ ರಚಿಸುವುದು ಸಾಧ್ಯ"ವೆಂಬ ಮಾತು ಕೇಳಿ ಬಂತು. ಇದು ಪರಿಷ್ಕರಣವಾದಿ ನಿಲುವು. ಬಂಡವಾಳಶಾಹಿ ಪ್ರಜಾಪ್ರಭುತ್ವ ವ್ಯವಸ್ಥೆಯ ಕುರಿತು ಭ್ರಮೆಗಳನ್ನು ಹೊಂದಿರುವವರ ಮಾತಿದು. ಸಂಸತ್ತು–ಚುನಾವಣೆ ಇತ್ಯಾದಿಗಳೆಲ್ಲ ಬಂಡವಾಳಶಾಹಿ ವರ್ಗಕ್ಕೆ ಅನುಕೂಲವಾಗಿರುವವರೆಗೆ ಮಾತ್ರ ಅವು ಉಳಿದಿರುತ್ತವೆ. ಈ ವೇದಿಕೆಗಳನ್ನು ಕಾರ್ಮಿಕ ವರ್ಗ ಕೈವಶಪಡಿಸಿಕೊಂಡು ಬಳಸಲಾರಂಭಿಸಿದಾಗ ಬಂಡವಾಳಶಾಹಿ ವರ್ಗ ತನ್ನ ಪ್ರಜಾಪ್ರಭುತ್ವವಾದಿ ಸೋಗನ್ನು ಕಿತ್ತು ಹಾಕಿ ನಗ್ನ ಫ್ಯಾಸಿಸ್ಟ್ ಸ್ವರೂಪ ತಳೆಯುತ್ತದೆ. ಬಂಡವಾಳಶಾಹಿಗಳು ರಚಿಸಿರುವ ಸಂಸತ್ತು, ವಿಧಾನಸಭೆ, ಮತ್ತು ಸರಕಾರಗಳನ್ನು ಕಾರ್ಮಿಕ ವರ್ಗ ತನ್ನ ಕ್ರಾಂತಿಕಾರಿ ಚಳುವಳಿಯ ಮುನ್ನಡೆಗಾಗಿ ಬಳಸಲೇಬೇಕು. ಆದರೆ ವೇದಿಕೆಗಳ ಕುರಿತು ಭ್ರಮೆ ಹೊಂದಿರಬಾರದು.

ಪ್ರಭುತ್ವ ವ್ಯವಸ್ಥೆಯ ಕುರಿತು ಲೆನಿನ್ ರಶ್ಯಾದ 1917ರ ಫೆಬ್ರವರಿ ಕ್ರಾಂತಿಯ ಉದಾಹರಣೆ ನೀಡಿ ಹೇಳಿರುವ ಮಾತುಗಳು ಗಮನಾರ್ಹ. ಫೆಬ್ರವರಿ ಕ್ರಾಂತಿಯ ಬಳಿಕ ರಶಿಯಾದಲ್ಲಿ "ದ್ವಂದ್ವ ಶಕ್ತಿ" (Dual power) ಇತ್ತೆಂದು ಲೆನಿನ್ ಹೇಳಿದ್ದಾರೆ. ಈ ಎರಡುಗಳಲ್ಲಿ ಮೊದಲನೆಯದು ಬಂಡವಾಳಶಾಹಿಗಳ ತಾತ್ಕಾಲಿಕ ಸರಕಾರ, ಎರಡನೆಯದು ಬಂಡವಾಳಶಾಹಿಗಳ ಸರಕಾರಕ್ಕಿಂತ ಸಂಪೂರ್ಣ ಬೇರೆಯಾದ ಸೋವಿಯತ್ ಕಾರ್ಮಿಕರ ಮತ್ತು

(8ನೇ ಪುಟ ನೋಡಿ)

ಮೊಜಾಂಬಿಕ್ ಅಧ್ಯಕ್ಷರ ಪ್ರಾಣಹರಣ

(1ನೇ ಪುಟದಿಂದ)

ಅಮೇರಿಕಾದ ಸಂಸತ್ತಿನ ಎರಡೂ ಸದನಗಳು ಆರ್ಥಿಕ ದಿಗ್ಬಂಧನವನ್ನು ಹೇರುವ ನಿರ್ಣಯ ಕೈಕೊಂಡಾಗ, ಯಾರ ರಕ್ತ ಕುಡಿದರೇನು ನನ್ನ ಹಣ ದಾಹ ತೀರದು ಎನ್ನುವ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಗಳೂ ತೋರಿಕೆಗಾದರೂ ಅಲ್ಪಸ್ವಲ್ಪ ದಿಗ್ಬಂಧನವನ್ನು ಹೇರಬೇಕಾದ ಪರಿಸ್ಥಿತಿ ಬಂದಾಗ ತನ್ನ ಮರಣಕಾಲ ಸನ್ನಿಹಿತವಾದುದು ಸ್ಪಷ್ಟವಾಗಿ ಕಣ್ಣಿಗೆ ರಾಚಿದ ದ. ಆಫ್ರಿಕಾ ಸರಕಾರ ಇತ್ತೀಚಿನ ಕೆಲವು ದಿನಗಳಲ್ಲಿ ಮೊಜಾಂಬಿಕ್ ಸರಕಾರದ ಮೇಲೆ, ಮೊಜಾಂಬಿಕ್ ಜನತೆಯ ಮೇಲೆ ಆರ್ಥಿಕ ಧಾಳಿ ಮಾಡುವ, ಆ ದೇಶದ ರೈಲು ಮಾರ್ಗಗಳನ್ನು ಕಿತ್ತುಹಾಕುವ ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಿತ್ತು. ಇದು ಒಂದುಕಡೆಯಾದರೆ, ಇದೇ ದ. ಆಫ್ರಿಕಾ ಆಶ್ರಯ ನೀಡಿರುವ ಅಮೇರಿಕ ಅಧ್ಯಕ್ಷ ರೀಗನ್ ಎಸೆಯುವ ನೂರಾರು ಲಕ್ಷ ಡಾಲರುಗಳ, ಶಸ್ತ್ರಾಸ್ತ್ರಗಳ ನೆರವಿನಿಂದ ಕೊಬ್ಬಿ ಬೆಳೆದ ಎಂ. ಎನ್. ಆರ್. ದರೋಡೆಕೋರರ ಕೊಲೆಗಡುಕತನ ಮತ್ತೊಂದು ಕಡೆ. ಮೊಜಾಂಬಿಕ್ ಗಣರಾಜ್ಯವನ್ನು ಕಾಡುವ ಸಾಂಕ್ರಾಮಿಕ ರೋಗಗಳಾಗಿವೆ.

ಇಂತಹ ಇಕ್ಕಟ್ಟಿನ ಸಮಯದಲ್ಲಿ ಮಾತಿಗಿಂತ ಕೃತಿ ಮೇಲು ಎನ್ನುವ ಈ ಗೆರಿಲ್ಲಾ ಹೋರಾಟಗಾರನ ನಾಯಕತ್ವವನ್ನು ಅಷ್ಟೇ ಅಲ್ಲ ಅತ್ಯಂತ ಆಯಕಟ್ಟಿನ ಸಚಿವರಾದ ರಕ್ಷಣಾ ಸಚಿವ, ಹಾಗೂ ಸಾರಿಗೆ ಸಚಿವರನ್ನು ಕಳೆದುಕೊಳ್ಳಬೇಕಾಯಿತು.

ಇದೇ ಸಮಯದಲ್ಲಿ ಪೋರ್ಚುಗೀಸರ ವಿರುದ್ಧ ಗೆರಿಲ್ಲಾ ಹೋರಾಟ ತೀವ್ರವಾಗಿ ಸಾಗಿರುವಾಗ ಮೊಜಾಂಬಿಕ್ ಇನ್ನೂ ಸ್ವಾತಂತ್ರ್ಯ ಪಡೆಯುವ ಮೊದಲೇ 'ಫ್ರೇಲಿಮೊ ಪಕ್ಷದ ಮೊದಲ ನಾಯಕ ಎಡ್ವರ್ಡೋ ಮೋಂಡ್ಲೇನ್ ರನ್ನು 1969 ರಲ್ಲಿ ಒಂದು ಪಾರ್ಸಲ್ ನಲ್ಲಿ ಬಾಂಬ್ ಹುದುಗಿಸಿ ಕೊಲೆ ಮಾಡಲಾಯಿತು ಎಂಬುದನ್ನು ನೆನಪಿಸಿಕೊಳ್ಳಬೇಕು.

ಮೊಜಾಂಬಿಕ್‌ನ ರಾಜಧಾನಿ ಮಾಪುಟೊನ ಜನಸಮೂಹಗಳು ಬೀದಿ ಬೀದಿಗಳಲ್ಲಿ ತಮ್ಮ ಶೋಕವನ್ನು ವ್ಯಕ್ತಪಡಿಸಿದರು. ಜಗತ್ತಿನ ಪ್ರಮುಖ ನಾಯಕರು, ಆಫ್ರಿಕಾದ ನಾಯಕರು ಈ ವೀರನ ನಾಮಸ್ಮರಣೆ ಮಾಡಿದ್ದಾರೆ.

ಅಂತರಾಷ್ಟ್ರೀಯ ಚಳುವಳಿ ಕಲಿತ ಪಾಠ

(7ನೇ ಪುಟದಿಂದ)

ಸೈನಿಕರ ಪ್ರತಿನಿಧಿ ಸಭೆ ಈ ಎರಡನೆಯ ಶಕ್ತಿ ಕ್ರಾಂತಿಕಾರಿ ಶಕ್ತಿ. ಅದು ಮೇಲಿನ ಹಂತದ ಪ್ರಭುತ್ವದಿಂದ ಜ್ಯಾರಿಯಾಗಿ ಬರುವ ಕಾನೂನುಗಳಿಂದ ರಚಿತವಾದ ಶಕ್ತಿ ಅಲ್ಲ ಕೆಳಗಿನ ಸ್ತರದ ಜನತೆಯ ನೇರ ಪ್ರೇರಣೆಯಿಂದ ಬೆಳೆಯುತ್ತಿರುವ ಶಕ್ತಿ ಎಂದು ಲೆನಿನ್ ಹೇಳಿದ್ದಾರೆ.

ದುರದೃಷ್ಟವಶಾತ್ ಚಿಲಿಯಲ್ಲಿ ಸಾಮಾನ್ಯ ಜನರ ಇಂತಹ ಕ್ರಾಂತಿಕಾರಿ ಶಕ್ತಿ ಇರಲಿಲ್ಲ. ರಶಿಯಾದಲ್ಲಿ ಬಂಡವಾಳಶಾಹಿಗಳ ಪ್ರತಿಕ್ರಾಂತಿ ಸಫಲವಾಗಲ್ಲದಿದ್ದರೆ ಅದಕ್ಕೆ ಕಾರಣ ಅಲ್ಲಿನ ಕ್ರಾಂತಿಕಾರಿ ಕಾರ್ಮಿಕವರ್ಗ ಮತ್ತು ಶಸ್ತ್ರ ಸಜ್ಜಿತರಾಗಿದ್ದ ಹಾಗೂ ಸೈನಿಕ ಉಡುಪಿನಲ್ಲಿ ಇದ್ದ ರೈತಾಪಿ ವರ್ಗ. ಚಿಲಿಯಲ್ಲಿ ಈ ರೀತಿ ಜನಸಾಮಾನ್ಯರು, ರೈತಾಪಿ ವರ್ಗ ಶಸ್ತ್ರ ಸಜ್ಜಿತರಾಗಿರಲಿಲ್ಲ. ಅಲ್ಲಿದ್ದ ಎರಡು ಶಕ್ತಿಗಳೆಂದರೆ ಮೊದಲನೆಯದು ಜನತೆಯ ಬೆಂಬಲದಿಂದ ಅಧಿಕಾರಕ್ಕೆ ಬಂದಿದ್ದ ಆದರೆ ಅಷ್ಟೇ ನಿಸ್ಸಹಾಯಕರಾಗಿದ್ದ ಪಾಪ್ಯುಲರ್ ಯುನಿಟಿ ರಂಗ, ಎರಡನೆಯದು ಶಸ್ತ್ರ ಸಜ್ಜಿತರಾಗಿದ್ದ ಪ್ರತಿಗಾಮಿ ವಿದ್ರೋಹಕಾರಿ ಸೈನಿಕರು.

ಇಂತಹ ಪರಿಸ್ಥಿತಿಯಲ್ಲಿ ಅಲೆಂಡೆ ಸರಕಾರ ಬಹುಕಾಲ ಉಳಿಯುವುದು ಸಾಧ್ಯವಿರಲಿಲ್ಲ. ಹೆಚ್ಚು ಕಡಿಮೆ ಇಂತಹದೇ ಪರಿಸ್ಥಿತಿ 1960ರ ದಶಕದಲ್ಲಿ ಇಂಡೋನೇಸಿಯಾದಲ್ಲೂ ಅಸ್ತಿತ್ವದಲ್ಲಿತ್ತು. ಅಲ್ಲಿ ಪ್ರಬಲವಾಗಿದ್ದ ಕಮ್ಯುನಿಸ್ಟ್ ಪಕ್ಷ ಇದೇ ದುರಂತವನ್ನು ಅನುಭವಿಸಬೇಕಾಯಿತು.

ಅಲ್ಲೆಂಡೆ ಸರಕಾರದ ಪತನವಾದ ಬಳಿಕ ಕ್ಯೂಬಾದ ಪ್ರಧಾನಿ ಫೀಡೆಲ್ ಕಾಸ್ಟ್ರೋ ಹೇಳಿದ ಒಂದು ಮಾತು ಸದಾಕಾಲ ನೆನಪಿನಲ್ಲಿ ಉಳಿಯುತ್ತದೆ.

"ನಮ್ಮ ಮಿತ್ರ ಸಾಲ್ವಡೋರ್ ಅಲ್ಲೆಂಡೆ ಅವರಿಗೆ ನಾವೊಂದು ಬಂದೂಕನ್ನು ಉಡುಗೊರೆಯಾಗಿ ನೀಡಿದ್ದೆವು. ಜಗತ್ತಿನ ಬಂಡವಾಳಶಾಹಿಗಳು ಈ ಬಂದೂಕಿನ ಕುರಿತು ಸಾಕಷ್ಟು ಅಪಪ್ರಚಾರ ನಡೆಸಿದ್ದಿದೆ. ಆದರೆ ನಮಗೆ ತುಂಬಾ ತೃಪ್ತಿ ನೀಡುವ ವಿಷಯವೆಂದರೆ ಈ ಬಂದೂಕನ್ನು ಸಾರ್ಥಕವಾಗಿ ಬಳಸಿಕೊಳ್ಳಲಾಗಿದೆ. ನಾವು ನೀಡಿದ್ದ ಬಂದೂಕನ್ನು ಉನ್ನತ ಆದರ್ಶ ಮತ್ತು ಕ್ರಾಂತಿಕಾರಿಗಳ ಉತ್ಕೃಷ್ಟ ಪರಂಪರೆಗೆ ಅನುಗುಣವಾಗಿ ಇದಕ್ಕಿಂತ ಚೆನ್ನಾಗಿ ಬಳಸಿಕೊಳ್ಳುವುದು ಸಾಧ್ಯವಿಲ್ಲ. ನಮ್ಮ ಕೊರಗು ಇಷ್ಟೇ; ಇಂತಹದೇ ಬಂದೂಕು ಚಿಲಿಯಲ್ಲಿನ ಪ್ರತಿಯೊಬ್ಬ ರೈತ ಕಾರ್ಮಿಕನ ಕೈಯ್ಯಲ್ಲಿದ್ದಿದ್ದರೆ ಫ್ಯಾಸಿಸ್ಟರ ಈ ಪ್ರತಿಕ್ರಾಂತಿ ನಡೆಯುತ್ತಲೇ ಇರಲಿಲ್ಲ"

-ಫಿಡೇಲ್ ಕಾಸ್ಟ್ರೋ.
21-9-1973 ರಂದು)

ಸ್ತ್ರೀ ವಿಮೋಚನೆಯಾಗುವವರೆಗೂ ಸಮಾಜವಾದ ಸಾಧ್ಯವಿಲ್ಲ

(1ನೇ ಪುಟದಿಂದ)

ಅಮೇಲೆ ಚಿಂತಿಸೋಣ. ಈಗ ಪ್ರಧಾನಿಯವರು ಮಾಡಿದ್ದ ಗುರುತರವಾದ ತಪ್ಪನ್ನು ತಿದ್ದಿ ಕೊಳ್ಳಬೇಕು. ರಾಜೀವ್ ಗಾಂಧಿಯವರು ಪಾರ್ಲಿಮೆಂಟಿನಲ್ಲಿ ಅಂಗೀಕರಿಸಿದ ನಿಯಮಾವಳಿ ಎಲ್ಲಾ ರೀತಿಯಲ್ಲೂ ಶೋಷಿಸಲ್ಪಟ್ಟ ಮುಸ್ಲಿಂ ಮಹಿಳೆಯರನ್ನು ಮತ್ತಷ್ಟು ಕತ್ತಲ ಕೂಪಕ್ಕೆ ನೂಕುತ್ತದೆ. ರಾಜೀವ್ ಗಾಂಧಿಯವರ ಈ ಮುಸ್ಲಿಂ ನಿಯಮಾವಳಿಯು ಈ ದೇಶವನ್ನು 100 ವರ್ಷಗಳ ಹಿಂದಕ್ಕೆ ನೂಕುತ್ತದೆ. ಈ ವಿಷಯದಲ್ಲಿ ಮಹಾತ್ಮ ಗಾಂಧಿಯವರ ಇಚ್ಛೆಗೆ ವಿರುದ್ಧವಾದ ಹಾದಿಯಲ್ಲಿ ರಾಜೀವ್ ಗಾಂಧಿಯವರು ಹೋಗುತ್ತಿದ್ದಾರೆ. ಮುಸ್ಲಿಂ ಮಹಿಳೆ ಮತ್ತು ಇತರ ಮಹಿಳೆಯರನ್ನು ಸಮಾನವಾಗಿ ಪರಿಗಣಿಸಬೇಕು ಎಂದರು ಕಾ. ಇ. ಎಂ. ಎಸ್.

ಮಹಿಳೆಯ ಕ್ರಿಯಾತ್ಮಕ ಸಹಕಾರವಿಲ್ಲದೆ ಯಾವ ಹೋರಾಟವು ಫಲಕಾರಿಯಾಗುವುದಿಲ್ಲ. ಮಹಿಳೆಯರ ಈ ಹೋರಾಟ ದುಡಿಯುವ ಜನರ ಹೋರಾಟದಲ್ಲಿ ಒಂದು ಭಾಗ ಆಗಬೇಕು ದೇಶದ ಮುಂದಿರುವ ಪ್ರಶ್ನೆಗಳು ಮಹಿಳೆಯರ ಪ್ರಶ್ನೆಗಳೂ ಆಗಿವೆ. ಕಾರ್ಮಿಕ ವರ್ಗ, ರೈತರು, ಕೃಷಿ ಕಾರ್ಮಿಕರ, ವಿದ್ಯಾರ್ಥಿಗಳನ್ನು ಭಾದಿಸುವ ಎಲ್ಲಾ ಪ್ರಶ್ನೆಗಳೂ ಮಹಿಳೆಯರನ್ನು ಭಾದಿಸುತ್ತದೆ. ಸ್ತ್ರೀಯರಿಗೇ ಪ್ರತ್ಯೇಕವಾದ ವಿಮೋಚನೆ ಸಾಧ್ಯವಾಗದು ಎಲ್ಲಾ ಜನ ಸಮುದಾಯದ ವಿಮೋಚನೆಯೊಡನೆಯೇ ಮಹಿಳೆ ವಿಮೋಚನೆ ಸಾಧ್ಯ ಸ್ತ್ರೀಯರಿಗೆ ಪೂರ್ಣ ಸ್ವಾತಂತ್ರ್ಯ, ಸಮಾನತೆ ದೊರಕುವುದು ಸಮಾಜವಾದದಲ್ಲಿ ಮಾತ್ರ ಅದೇ ಸಮಯದಲ್ಲಿ ಮಹಿಳೆಯರಿಗೆ ಸಮಾನತೆ ಸ್ವಾತಂತ್ರ್ಯ ದೊರಕಿದಾಗ ಮಾತ್ರ ಸಮಾಜವಾದಿ ಸಮಾಜ ಸಾಧ್ಯ. ನಮ್ಮ ದೇಶದಲ್ಲಿ ಸಮಾಜವಾದವನ್ನು ಜಾರಿಗೆ ತರುತ್ತೇವೆನ್ನುವ ಪಕ್ಷಗಳು ತುಂಬಿ ತುಳುಕುತ್ತಿವೆ. ಆದರೆ ಈ ಪಕ್ಷಗಳಿಗೆ ಮಹಿಳೆಯ ಸಮಾನತೆಯನ್ನು ತರುವುದು ಮಾತ್ರ ಬೇಡ. ಈ ಪರಿಸ್ಥಿತಿಯಲ್ಲಿ ಭಾರತದ ಮಹಿಳಾ ಸಮುದಾಯಕ್ಕೆ ಒಂದು ಪ್ರಧಾನಪಾತ್ರವಿದೆ. ಎಡ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಲಪಡಿಸುವುದು ಮಹಿಳೆಯರ ಒಂದು ಪ್ರಮುಖ ಕರ್ತವ್ಯವಾಗಿದೆ ಎಡ ಪ್ರಜಾಸತ್ತಾತ್ಮಕ ಚಳುವಳಿ ಬಲಗೊಂಡಾಗ ಮಹಿಳಾ ವಿಮೋಚನಾ ಚಳುವಳಿಯೂ ಬಲಗೊಳ್ಳುತ್ತದೆ

ವರದಕ್ಷಿಣೆ ಮೊದಲಾದ ಸಮಾಜಿಕ ಅನಿಷ್ಟಗಳನ್ನು ಅನುಭವಿಸುತ್ತಿರುವುದು ಮಹಿಳೆಯರು ಮಾತ್ರವೇ ಅಲ್ಲ ಇವು ಎಲ್ಲಾ ಜನ ವಿಭಾಗಗಳಿಗೂ ಧಾವಕವಾಗಿದೆ.

ಸ್ತ್ರೀಯರ ಮುಖ್ಯ ಶತ್ರು ಪುರುಷ ಎಂದು ಕೆಲವರು ಅಪ ಪ್ರಚಾರ ನಡೆಸುತ್ತಿದ್ದಾರೆ. ಇದು ಬಂಡವಾಳ ಶಾಹಿಗಳ ಕುತಂತ್ರ. ವರ್ಗ ಹೋರಾಟದಲ್ಲಿ ಸ್ತ್ರೀಯರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸುವುದನ್ನು ತಡೆಯುವುದಕ್ಕಾಗಿ ಈ ಪ್ರಚಾರ ನಡೆಯುತ್ತಿದೆ. ರಾಜೀವ್ ಗಾಂಧಿಯವರು ಭಾರತವನ್ನು 21 ನೇ ಶತಮಾನಕ್ಕೆ ನೂಕಬೇಕೆಂದು ಪ್ರಯತ್ನ ನಡೆಸುತ್ತಿದ್ದಾರೆ. 21 ನೇ ಶತಮಾನಕ್ಕೆ ಹೋಗುವ ಈ ಭಾರತದಲ್ಲಿ ಮಹಿಳೆಯರ ಮೇಲೆ ಆಕ್ರಮಣಗಳು, ದುರ್ಬಲ ವರ್ಗಗಳ ಮೇಲೆ ಧಾಳಿ ಹೆಚ್ಚಾಗುತ್ತಲೇ ಹೋಗುತ್ತಿವೆ. ಇದು ಒಂದು ವಿರೋಧಾಭಾಸದಂತೆ ಕಾಣಿಸಬಹುದು. ಆದರೆ ಬಂಡವಾಳ ಶಾಹಿ ವ್ಯವಸ್ಥೆಯ ಲಕ್ಷಣವೇ ಇದು ಎಂದು ಇ ಎಂ ಎಸ್ ಪ್ರತಿಪಾದಿಸಿದರು.

ನಮ್ಮ ಈ ಮಹಿಳಾ ಸಂಘಟನೆ ವಿಶ್ವ ಶಾಂತಿಚಳುವಳಿಯ ಒಂದು ಭಾಗವಾಗಿದೆ ಇದು ನಮ್ಮೆಲ್ಲರಿಗೆ ಒಂದು ಅಭಿಮಾನಕರವಾದ ಸಂಗತಿಯಾಗಿದೆ ಎಂದರು.

2ನೇ ಅಖಿಲ ಭಾರತ ಮಹಿಳಾ ಸಮ್ಮೇಳನ

ದೇಶದ ಎಲ್ಲಾ ರಾಜ್ಯಗಳಿಂದಲೂ 700ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಎರಡನೇ ಸಮ್ಮೇಳನ ದಿನಾಂಕ 17 ರಿಂದ 20 ರವರೆಗೆ ನಡೆಯಿತು ಸಮ್ಮೇಳನವನ್ನು ಸಿ.ಪಿ.ಐ (ಎಂ)ನ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್‌ರವರು ಉದ್ಘಾಟಿಸಿದರು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಕಾಂ. ಜ್ಯೋತಿಬಸುರವರು ಸಮ್ಮೇಳನ ಎರಡನೆಯ ದಿನ ಭಾಗವಹಿಸಿ ಮಾತನಾಡಿದರು.

ಕರ್ನಾಟಕದಿಂದ 6 ಜನ ಪ್ರತಿನಿಧಿಗಳು - ಕಾಂ. ಹೆ. ಬಿ ಕಸ್ಮೀರಿ, ಕಾಂ. ಶ್ಯಾಮಲಾ ಪೂಜಾರ್, ಕಾಂ. ಸುಲೋಚನಾ ಸಂಘೆ, ಕಾಂ. ಮಂಜುಳಾ, ಕಾಂ. ಶಾರದಾ ಕಿಲ್ಲೆದ್ ಹಾಗೂ ವೀಕ್ಷಕಿಯಾಗಿ ಕಾಂ. ಶಾಂತಕುಮಾರಿ ಭಾಗವಹಿಸಿದ್ದರು. ಪ. ಬಂಗಾಳದಿಂದ 250 ಪ್ರತಿನಿಧಿಗಳು ಭಾಗವಹಿಸಿದ್ದರು.

ಹತ್ತಾರು ಸಾವಿರ ಜನರು ಭಾಗವಹಿಸಿದ್ದ ವರ್ಣರಂಜಿತ ಮೆರವಣಿಗೆಯಲ್ಲಿ 'ಪುನ್ನಪ್ರವಯಲಾರ್' ಹೋರಾಟದ, ಕುಟ್ಟನಾಡ್ ಹೋರಾಟದ ವೀರ ಮಾತೆಯರು ತಮ್ಮ ಘೋಷಣೆಗಳನ್ನು ಕೂಗುತ್ತಾ ಭಾಗವಹಿಸಿದ್ದುದು ಒಂದು ಚೇತೋಹಾರಿ ದೃಶ್ಯವಾಗಿತ್ತು. ಪೂರ್ತಿ ಮಹಿಳೆಯರಿಂದಲೇ ಕೂಡಿದ ಬ್ಯಾಂಡ್‌ಸೆಟ್, ಬಿಳಿಯುಡುಪು ಧರಿಸಿದ್ದ ಸಾವಿರಾರು ಮಹಿಳಾ ವಾಲಂಟಿಯರುಗಳು ಮೆರವಣಿಗೆಯಲ್ಲಿದ್ದರು.

ಮಹಿಳಾ ಸಂಘಟನೆಯಿಂದ ವಿಚಾರ ಸಂಕಿರ್ಣ

ಅಖಿಲ ಭಾರತ ಪ್ರಜಾ ಸತ್ತಾತ್ಮಕ ಮಹಿಳಾ ಸಂಘಟನೆಯ ರಾಯಚೂರು ಘಟಕ, ತನ್ನ ಕೇಂದ್ರ ಸಮಿತಿಯ ಕರೆಯ ಮೇರೆಗೆ ಸೆಪ್ಟೆಂಬರ್ 27ರಂದು ರಾಯಚೂರಿನ ಕರ್ನಾಟಕ ಸಂಘದಲ್ಲಿ ರಾಷ್ಟ್ರಿಯ ಐಕ್ಯತೆ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಶ್ರೀಮತಿ ಶಿವ ಕುಮಾರಿ ಅವರು ಸಂಘಟನೆಯ ಮತ್ತು ಕಾರ್ಯ ಕ್ರಮದ ಪರಿಚಯ ಮಾಡಿಕೊಟ್ಟರು.

ವಿಚಾರ ಸಂಕಿಣದಲ್ಲಿ ಟಾಗೂರ್ ಕಾಲೇಜಿನ ಉಪನ್ಯಾಸಕರಾದ ಶ್ರೀಮತಿ ಮೀನಾಕ್ಷಿ ಖಂಧಿ ಮಠ ಮತ್ತು ಎಸ್. ಎಫ್. ಆರ್. ಜಿ ಮಹಿಳಾ ಕಾಲೇಜಿನ ಉಪನ್ಯಾಸಕರಾದ ಶ್ರೀ ಸುಧಾಕರ್ ಅವರುಗಳು ಭಾಗವಹಿಸಿ ರಾಷ್ಟ್ರೀಯ ಐಕ್ಯತೆಯನ್ನು ಬಲ ಪಡಿಸುವ ಅವಶ್ಯಕತೆಯನ್ನು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಮತಿ ಶ್ಯಾಮಲಾ ಪೂಜಾರ್ ಅವರು ನಮ್ಮ ದೇಶದ ಐಕ್ಯತೆಗೆ ಒದಗಿರುವ ಗಂಡಾಂತರಕ್ಕೆ ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಪಿತೂರಿಗಳೆ ಕಾರಣವೆಂಬುದನ್ನು ಉದಾಹರಣೆಗಳ ಸಹಿತ ವಿವರಿಸಿದರು.

ಕೊನೆಯಲ್ಲಿ ಶ್ರೀಮತಿ ಕಮಲಾ ಅವರು ವಂದನಾರ್ಪಣೆ ಸಲ್ಲಿಸಿದರು.

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone: 75331 Editor P. Ramachandra Rao Managing Editor: N. K. Upadhyaya